ಶ್ರೀಸುಬ್ಬರಾಯರಂತರ್ಗತ ಶ್ರೀವಾದಿರಾಜಾಂತರ್ಗತ ಶ್ರೀಮದ್ವೇಶಾಭಿನ್ನ
ಶ್ರೀಲಕ್ಷ್ಮೀಹಯವದನಾತ್ಮಕ ಶ್ರೀಕೃಷ್ಣಾಯನಮಃ ॥
ಶ್ರೀ ಗುರುರಾಜೋ ವಿಜಯತೇ ॥

# ಅಥ ಸ್ವಾಪ್ನವೃಂದಾವನಾಖ್ಯಾನ ಸಾರಾಂಶ

(ಈ ಸಾರಾಂಶವು ''ಸ್ವಾಪ್ನವೃಂದಾವನಾಖ್ಯಾನ ಪಂಡಿತರಿಂದಲೂ ಪಾರಾಯಣಾರ್ಹ'' ಕೈಪಿಡಿಯ ಪ್ರಮೇಯಶೋಧನೆಗೆ ಅಂಗವಾದ ವಿವರಣಸಮುಚ್ಚಯ ಎಂಬ ಎರಡನೇ ಭಾಗವಾಗಿರುತ್ತದೆ)

## ಪ್ರಥಮಾಧ್ಯಾಯ

113ಶ್ಲೋಕಗಳ ಈ ಅಧ್ಯಾಯದಲ್ಲಿ ತನ್ನ ಶರಣಾಗತಭಕ್ತ ಏಡಮೂಕವಿಪ್ರನಿಗೆ ಶ್ರೀವಾದಿರಾಜರು ಸ್ವಪ್ನದಲ್ಲಿ ದರ್ಶನಕೊಟ್ಟು ಹೇಳಿದ ವೃತ್ತಾಂತ ಆರಂಭವಾಗುತ್ತದೆ. ಮೊದಲು ಹತ್ತು ಶ್ಲೋಕಗಳಿಂದ ಶ್ರೀಹರಿಸ್ತುತಿ, ರಾಮ, ಕೃಷ್ಣ , ವೇದವ್ಯಾಸ, ಹಯಗ್ರೀವ, ತ್ರಿವಿಕ್ರಮ, ವಾಮನ, ಗಜೇಂದ್ರವರದರೂಪಗಳಿಗೆ ಸ್ತೋತ್ರರೂಪಮಂಗಳಮಾಡಿ- ''ಇಂದ್ರೋ ರುದ್ರಃ ಕುಬೇರಶ್ಚ'' ಇತ್ಯಾದಿ ನಾಲ್ಕು ಶ್ಲೋಕಗಳಿಂದ ಇಂದ್ರರುದ್ರಾದಿ ದಿಕ್ಪಾಲಕರೂ, ಚಂದ್ರಸೂರ್ಯಾದಿ ದೇವತೆಗಳೂ ವೃಂದಾವನಸ್ಥ ಹಯಗ್ರೀವನನ್ನು ನೈವೇದ್ಯ ಕಾಣಿಕೆಗಳನ್ನಿಟ್ಟು ಉಪಾಸನೆ ಮಾಡುತ್ತಾರೆ ಎಂದು ಹೇಳಿದ್ದಾರೆ. ಶ್ರೀಹರಿಯ ಉಪಾಸನೆಗೆ 'ವಿಶಿಷ್ಟಪ್ರತಿಮಾ ವಾಯುರೇವ' ಎಂದು ಛಾಂದೋಗ್ಯಭಾಷ್ಯದಲ್ಲಿ ನಿರ್ಣಯ ಇದೆ. ಇಲ್ಲಿ ರುದ್ರಾದಿಕರ್ತೃಕ ಹಯಗ್ರೀವ ಉಪಾಸನೆಗೆ ವೃಂದಾವನಸ್ಥ ಗುರುರಾಜರು ಪ್ರತಿಮಾ ಎಂದಾಯಿತು. ಅದು ವಾದಿರಾಜಗುರುಗಳ ಋಜುತ್ವ ನಿರ್ಣಾಯಕ ಲಿಂಗ. ಉಪಕ್ರಮದಲ್ಲೇ ಹೀಗೆ ಇದೆ. ಅನಂತರ ಅವರೇ ವೃಂದಾವನ ಮಹಿಮೆ ಹೇಳಿದ್ದಾರೆ. ''ನನ್ನನ್ನು ಸೇವಿಸುತ್ತಾ 33ಕೋಟಿ ದೇವತೆಗಳೂ ವೃಂದಾವನದಲ್ಲಿ ಇದ್ದಾರೆ. ಹಯಗ್ರೀವದೇವರ ಆಜ್ಞೆಯಿಂದ ವೃಂದಾವನದಲ್ಲಿ ಸರ್ವತೀರ್ಥಮಾನಿಗಳೂ, ಕ್ಷೇತ್ರಮಾನಿಗಳೂ, ವನಮಾನಿಗಳೂ, ಪರ್ವತಾಭಿಮಾನಿಗಳೂ, ಗಂಗಾದಿ ನದ್ಯಭಿಮಾನಿ ಗಳೂ ''ಮಮ ವೃಂದಾವನೇ



ಪುಣ್ಯೇ ತತ್ಪಶ್ಚಾತ್ತು ಸರೋವರೇ'' ಶ್ಲೋಕ 3. (ಅರ್ಥ – ನನ್ನ ವೃಂದಾವನದಲ್ಲಿ ಒಂದು ರೂಪ ; ಧವಳಸರೋವರದಲ್ಲಿ ಒಂದು ರೂಪ). ಹೀಗೆ ದ್ವಿರೂಪದಿಂದ ಸನ್ನಿಹಿತರಾಗಿದ್ದಾರೆ. ಆದ್ದರಿಂದ ಧವಳಗಂಗಾ ಅತಿಪವಿತ್ರ. ಇದನ್ನು ಬ್ರಾಹ್ಮಣನಿಂದ ಕೇಳಿ ಭಜಿಸಬೇಕು ಎಂದಿದ್ದಾರೆ. ಶ್ಲೋಕ 34ರಲ್ಲಿ ಈ ಆಖ್ಯಾನಪಾರಾಯಣ ಫಲವಿದೆ. (ಅರ್ಥ- ಮಡಿಯಿಂದ ಮೂರು ಸಂಧ್ಯಾಕಾಲದಲ್ಲಿ ವೃಂದಾವನಸ್ತೋತ್ರ ಮಾಡಿದರೆ ಅವನಿಗೆ ಅಕಾಲಮೃತ್ಯು ನನ್ನ ಅನುಗ್ರಹದಿಂದ ಆಗುವುದಿಲ್ಲ.)

ಧವಳಗಂಗಾ, ಗಂಗಾಧರ, ಹನುಮಂತ, ತ್ರಿವಿಕ್ರಮಸ್ವಾಮಿ ಇವರ ಸನ್ನಿಧಾನ ಹೇಳಿದೆ. ಅಶ್ವತ್ಥಸ್ತುತಿ, ಹಯಗ್ರೀವಸ್ತುತಿ, ಹನುಮಸ್ತುತಿ, ರಾಮಸ್ತುತಿ, ನರಸಿಂಹಸ್ತುತಿ ಇವೆಲ್ಲ ಇದೆ. ಈ ಗ್ರಂಥ ವಾದಿರಾಜರೇ ಮಾಡಿದ್ದು ಎಂದಿದೆ. ಶ್ಲೋಕ 58 (ಅರ್ಥ- ವಾಗೀಶತೀರ್ಥ ಕರಕಮಲಸಂಜಾತರಾದ ವೃಂದಾವನಸ್ಥರಾದ ವಾದಿರಾಜಮುನಿಗಳಿಂದ ಬ್ರಾಹ್ಮಣನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡ ರೂಪದಿಂದ ಈ ಪುಣ್ಯಕರವಾದ ವೃಂದಾವನಸ್ತೋತ್ರವು ರಚಿತವಾಗಿದೆ. ಇದು ಪಾರಾಯಣಮಾಡುವವರಿಗೆ ಸಂಪತ್ಪ್ರದವಾದದ್ದು). ಆದ್ದರಿಂದ ಈ ಕೃತಿಗೆ ಋಜುಪ್ರೋಕ್ತತ್ವರೂಪ ಆಪ್ತಿಮೂಲತ್ವವು ಬಂದಿತು. ನರನಾರಾಯಣಸ್ತುತಿ ಇದೆ. ಉಡುಪಿಕ್ಷೇತ್ರ ಸರ್ವೋತ್ಕೃಷ್ಟ ಎಂದು ಸ್ತುತಿ ಇದೆ. ವೇದವ್ಯಾಸರ ವಚನವು ಉಡುಪಿ ಉತ್ಕರ್ಷಸಿದ್ಧಿಗಾಗಿ ಹೇಳಲ್ಪಟ್ಟಿದೆ. ''ಆ ಬದರೀನಾರಾಯಣ ಮತ್ತು ಈ ಉಡುಪಿ ಕೃಷ್ಣ ಇವರಿಬ್ಬರ ಪೂಜೆಮಾಡಿ ನೀನು ಸಿದ್ಧನಾಗಿದ್ದೀ. ನಿನ್ನ ಮಹಿಮೆ ಕೇಳಿದವನಿಗೆ ವೈರಾಗ್ಯ ಭಕ್ತಿ ಬರುತ್ತವೆ'' ಎಂದು ವ್ಯಾಸರು ವಾದಿರಾಜರಿಗೆ ಹೇಳಿದ್ದಾರೆ.

ನಂತರ ಶ್ರೀಹಯಗ್ರೀವದೇವರು ಮಧುಕೈಟಭರನ್ನು ಕೊಂದ ಕಥೆ ಹೇಳಿ, ಅದರ ಶ್ರವಣದಿಂದ ಲಕ್ಷ್ಮೀಪ್ರಾಪ್ತಿಫಲವೆಂದು ವಿಪ್ರನಿಗೆ ಹೇಳಿ, ತಮಗೂ ಅದರ ಪ್ರಭಾವದಿಂದ ಲಕ್ಷ್ಮೀರೂಪಗಳ ದರ್ಶನವಿಶೇಷವಾಯಿತು ಎಂದಿದ್ದಾರೆ. ಇಂತಹ ಕಥೆ ಹೇಳುವಾಗ ತಾರತಮ್ಯಮೀರಿ ನಡೆಯಬಾರದು ಎಂದು ತೋರಿಸಲು ಭೂದೇವತೆ ಲಕ್ಷ್ಮೀ ದೇವಿಯರ ದೆಸೆಯಿಂದ ತುಂಬಾ ಕಮ್ಮಿ ಎಂದು ನಿರ್ಣಯವನ್ನು ಸಯುಕ್ತಿಕವಾಗಿ ತಿಳಿಸಿದ್ದಾರೆ. ಹಿರಣ್ಯಾಕ್ಷನನ್ನು ಕೊಂದು ವರಾಹದೇವರು ಭೂಮಿಯನ್ನು ತೊಡೆಯ

ಮೇಲಿಸಿಕೊಂಡು ಬಂದು ಪುನಃ ಪುನಃ ಸಂತೈಸಿದರು. ಆಕೆಗೆ ತಾನು ಲಕ್ಷ್ಮೀದೇವಿಯನ್ನು ಮೀರಿದವಳೆಂದು ಗರ್ವಬಂದಿತು. ಆ ಪಾಪದಿಂದ ಅವಳಿಗೆ ಕೆಟ್ಟಮಗ ''ನರಕಾಸುರ'' ಹುಟ್ಟಿದ. ದೇವತೆಗಳನ್ನೇ ಆ ಪಾಪಿ ಹಿಂಸೆ ಮಾಡಿದ. ವರಾಹಸ್ವಾಮಿ ಅವನ ಪಾಪವೃದ್ಧಿಗಾಗಿಯೇ ತನ್ನ ಕೋರೆದಾಡೆಯನ್ನು ಕಿತ್ತುಕೊಟ್ಟನು. ಆ ವೈಷ್ಣವಾಸ್ತ್ರದಿಂದ ನರಕಾಸುರನು ದೇವ ಕಂಟಕನಾಗಿ ಬ್ರಹ್ಮಪದವಿಗಾಗಿ ಅಪೇಕ್ಷೆಮಾಡಿದನು. ಕೃಷ್ಣಾವತಾರ ಮಾಡಿದಾಗ ದೇವರು ನರಕನನ್ನು ಕೊಂದನು. ಲಕ್ಷ್ಮೀದೇವಿಯರ ಪುತ್ರ ಬ್ರಹ್ಮರಾಯ ಜಗದ್ಗುರು. ಪರಮ ವಿಷ್ಣುಭಕ್ತ. ಪುತ್ರರ ವ್ಯತ್ಯಾಸದಿಂದ ತಾಯಿಯರುಗಳ ತಾರತಮ್ಯ ಗೊತ್ತಾಗುತ್ತದೆ. ಅದಕ್ಕೇ ಗರ್ವರಹಿತ ಭಕ್ತಿಯಿಂದ ದೇವರನ್ನು ಮೆಚ್ಚಿಸಬೇಕು. ಈ ಲಕ್ಷ್ಮೀದೇವಿ ಮಹಿಮೆ ತಿಳಿದು ಭೂಮ್ಯುದ್ಧಾರಕಥೆ ಕೇಳಿ ಭಕ್ತಿಮಾಡಿದರೆ ಅಧಿಕಾರಿಯು ಭೂಪತಿಯಾಗುವನು. ಸಾಮಾನ್ಯರಿಗೆ ಜಮೀನು ಮನೆ ಆಗುತ್ತದೆ. ನಿಮಗೇನು ಬಂತು ಅಂದರೆ, ವಾದಿರಾಜರು ಹೇಳುತ್ತಾರೆ – 'ಸರ್ವತ್ರ ತಾಂ ಶ್ರಿಯಂ ದೃಷ್ಟ್ವಾ(109)' ಅನೇಕ ರೂಪಗಳಿಂದ ದೇವರನ್ನು ಸೇವಿಸುತ್ತಿರುವ ಲಕ್ಷ್ಮೀದೇವಿಯನ್ನೇ ಹರಿಯ ವಕ್ಷಸ್ಥಳದಲ್ಲೂ, ಎಲ್ಲಾ ದಿಕ್ಕುಗಳಲ್ಲೂ ಕಂಡು ನಾನು ''ಪರಮಾನಂದನಿರ್ಭರನಾದೆ'' ಎಂದಿದ್ದಾರೆ. ಹೀಗೆ ಕಥೆ ಹೇಳಿ, ನಾಲ್ಕು ಶ್ಲೋಕ ಗಳಿಂದ ಫಲಸ್ತುತಿ ಹೇಳಿದ್ದಾರೆ. ದೇವತಾದರ್ಶನ ಪಾಠಕರಿಗೆ ಆಗುತ್ತದೆ ಎಂದಿದ್ದಾರೆ. ಈ ಆಖ್ಯಾನ ಪಾರಾಯಣದಿಂದ ಪುರುಷಸೂಕ್ತ ಅಧ್ಯಯನ ಪುಣ್ಯ ಬರುತ್ತದೆ. ಹಯಗ್ರೀವ ಸ್ವಾಮಿಯು ಭಕ್ತರ ರಕ್ಷಣೆ ಮಾಡುತ್ತಾನೆ. ಹರಿಗುರು ಭಕ್ತ್ಯಾದಿ ಸಿದ್ಧಿಯೇ ಮುಂತಾದ ಸಾಧನ ಪೂರ್ತಿಯಾಗುತ್ತದೆ. ಹೀಗೆ ಎಲ್ಲಾ ಅಧ್ಯಾಯದ ಕೊನೆಯಲ್ಲೂ ಫಲಸ್ತುತಿ ತಿಳಿಯಬೇಕು. ಫಲಕೊಡುವ ಸಾಮರ್ಥ್ಯ ಅವರಿಗೆ ಇದೆ. 'ವಾಯುಶ್ಚ ತದನುಜ್ಞಯಾ' ಎಂದು ಪ್ರಮಾಣವಿದೆ. ಅವರು ವಾಯುಸದೃಶರು ಎಂದು ಗೊತ್ತಾಗುತ್ತೆ. ಫಲ ತಪ್ಪುವುದಿಲ್ಲ.

॥ಪ್ರಥಮಾಧ್ಯಾಯ ಮುಗಿದಿದೆ. ॥ಶ್ರೀವಾದಿರಾಜಾಂತರ್ಗತಕೃಷ್ಣಾರ್ಪಮಸ್ತು॥

## ದ್ವಿತೀಯಾಧ್ಯಾಯ

ಒಟ್ಟು 63 ಶ್ಲೋಕಗಳು. 'ಕೇಳು ವಿಪ್ರನೇ! ರುದ್ರಾದಿ ದೇವತೆಗಳೆಲ್ಲರ ಬಿಂಬಗಳೂ



ನನ್ನ ವೃಂದಾವನದಲ್ಲಿವೆ. ಆದ್ದರಿಂದ ಅವರು ಇಲ್ಲಿಗೆ ಬಂದು ನನ್ನ ವೃಂದಾವನವನ್ನೇ ವಿಶಿಷ್ಟ ಪ್ರತಿಮೆ ಮಾಡಿಕೊಂಡು ಭಗವದುಪಾಸನೆ ಮಾಡುತ್ತಾರೆ' ಎಂದು ''ಇಂದ್ರೋಪಿ ಸಾಂದ್ರ ಸಂತೋಷಾತ್'' ಮುಂತಾದ ಹದಿನೆಂಟು ಶ್ಲೋಕಗಳಲ್ಲಿ ಹೇಳುತ್ತಾರೆ. ಪೂರ್ವಾಧ್ಯಾಯ ದಲ್ಲಿ ಋಜುವಾದ್ದರಿಂದ ತಾವು '' ವಿಶಿಷ್ಟಪ್ರತಿಮಾ'' ಎಂದು ಹೇಳಿ, ಈ ಅಧ್ಯಾಯದಲ್ಲಿ ಸೇವಕರು ''ಸ್ವಸ್ವಬಿಂಬದರ್ಶನ'' ಮಾಡುತ್ತಾರೆಂದೂ ಇನ್ನೊಂದು ಕಾರಣ ಕೊಟ್ಟಿದ್ದಾರೆ.

ಅನಂತರ ತಮ್ಮ ದಿವ್ಯದೃಷ್ಟಿಯಿಂದ ಮುಂದಿನ ಕಾಲ ನೋಡುತ್ತಾ ಈ ಏಡಮೂಕನು ವೃಂದಾವನಾಚಾರ್ಯರಾಗಿ ಹುಟ್ಟಿ 1804ರಮೇಲೆ ಶ್ರೀಕೃಷ್ಣೋತ್ಸವಮಾಡಿಕೊಂಡು ಬಂದು ಮಾಡಿಸುವ ತ್ರಿವಿಕ್ರಮ ರಥೋತ್ಸವ, ವಾದಿರಾಜರ ಪುಣ್ಯದಿನೋತ್ಸವ ಇವುಗಳ ವೈಭವವನ್ನು ವರ್ಣಿಸುತ್ತಾರೆ. ತಾವು ಬ್ರಹ್ಮಾದಿಗಳಿಂದ ಸಹಿತವಾಗಿ ಬಂದು ಆಶೀರ್ವದಿಸು ವುದಾಗಿಯೂ, ರೂಪಾಂತರದಿಂದ ವಿಪ್ರನಲ್ಲಿದ್ದೂ ಆವೇಶತನದಿಂದ ಎಲ್ಲಾ ದೇವರ ಕಾರ್ಯಗಳನ್ನೂ ಮಾಡಿಸಿ ಇವನಿಗೆ ಇಂದ್ರಪದವಿಯನ್ನು ಕೊಡಿಸುವುದಾಗಿಯೂ ಸೂಚಿಸಿದ್ದಾರೆ. ''ಪಶ್ಯಾಮಿ ಚಾಕಾಶವಿಮಾನಕೋಶೇ ನಾಕೀಶಮಿತ್ಥಂ ಕುರು ಸತ್ಯಮೇವ'' (ಭವಿಷ್ಯವೆಂಬ ವಿಮಾನಮಧ್ಯದಲ್ಲಿ ನೀನು ಇಂದ್ರನಾಗುವುದು ನನಗೆ ಕಾಣುತ್ತದೆ). ನೀನು ನಾನು ಹೇಳಿದ್ದನ್ನೆಲ್ಲಾ ಮಾಡು. ''ತೋಕಸ್ಯ ಸೇವಾಂ ಕುರು ಸರ್ವದೈವ'' ವೇದವೇದ್ಯರ ಸೇವೆಯನ್ನು ಸರ್ವದಾ ಮಾಡುತ್ತಿರು ಎಂದಿದ್ದಾರೆ. ವೇದವೇದ್ಯರು ಭಾವೀ ಲಾತವ್ಯರು ಎಂದು ಸೂಚಿಸಿದ್ದಾರೆ. ಅನಂತರದಲ್ಲಿ ವೃಂದಾವನ ಸೇವೆಯು ಯತಿಗಳಿಗೂ ಮನೋ- ನಿಗ್ರಹಾದಿಗಳನ್ನು ಕೊಟ್ಟು ಕಾಪಾಡುತ್ತದೆ. ಮೀಮಾಂಸಾಶಾಸ್ತ್ರದ ಯುಕ್ತಿಜ್ಞ ಪಂಡಿತರನ್ನೂ ಉದ್ಧರಿಸುತ್ತದೆ. ಅಂತಹ ವೃಂದಾವನಸೇವೆಗೆ ಅವಕಾಶವಾದಾಗ ಅದನ್ನು ತ್ಯಜಿಸಿದವನಿಗೆ ಅವನು ಮಾಡಿದ ಪುಣ್ಯ ಹಾಳು ಎಂದು 61/62ಶ್ಲೋಕದಲ್ಲಿ ಹೇಳುತ್ತಾರೆ. (ಅರ್ಥ– ಯಾವಾತನು ವೃಂದಾವನಸ್ಥ ಕೃಷ್ಣನನ್ನು ಸೇವಿಸುವುದಿಲ್ಲವೋ ಅವನ ಸತ್ಯ, ಅವನ ಜಪ, ಅವನ ದಾನ, ಅವನ ಮನನ, ಅವನ ಸದಾಚಾರ ಕಾರ್ಯಗಳೆಲ್ಲಾ ವ್ಯರ್ಥ. ಆದ್ದರಿಂದ ವೃಂದಾವನಸ್ಥ ಗೋಪಾಲಕೃಷ್ಣನ ಪಾದಕ್ಕೆ ಓಡಿಬಂದು ಬೀಳಬೇಕು.) ಉತ್ತಮರ ಅವಜ್ಞೆ

ಆಗಿ ಹೋಗುತ್ತೆ ಎಂದು ಭಾವ. ಮುಮುಕ್ಷುಗಳು ಪಂಚವೃಂದಾವನ ಸೇವೆ ಮಾಡಿಯೇ ತೀರಬೇಕು . ಗುರುರಾಜರ ಅನುಗ್ರಹ ಸಂಪಾದಿಸಿ ಬೇರೆ ಸಾಧನೆ ಸಿದ್ಧಿಗಳನ್ನು ಚಿಂತಿಸಬೇಕು ಎಂದುಬೋಧಿಸಿ ಕಾರುಣ್ಯ ವ್ಯಕ್ತಿ ಮಾಡಿದ್ದಾರೆ. ಇದೆಲ್ಲಾ ಸರ್ವಪ್ರಮಾಣ ಅವಿರುದ್ಧ ಸಾತ್ವಿಕ ಪ್ರಮೇಯ. ॥ಶ್ರೀವಾದಿರಾಜಾಂತರ್ಗತ ಶ್ರೀಮದ್ಧ್ವೇಶಾರ್ಪಣಮಸ್ತು॥

## ತೃತೀಯಾಧ್ಯಾಯ

ಒಟ್ಟು108 ಶ್ಲೋಕ ಮತ್ತು5 ಪ್ರಕರಣ ಹೊಂದಿದ್ದು. ಮೊದಲನೆ ವಿಪ್ರಪ್ರಕರಣದಲ್ಲಿ ವಾದಿರಾಜರು ದ್ವಿಜರಿಗೆ ವಾದಿರಾಜಮಂತ್ರವನ್ನು ಉಪದೇಶ ಮಾಡಿದ್ದಾರೆ. ಸ್ವಪ್ನದಲ್ಲಿ ಉಪದಿಷ್ಟವಾದರೂ ಮಂತ್ರವು ಸಿದ್ಧಿಸುತ್ತೆ . ಅಂತಹ ದಿವ್ಯಮಂತ್ರಕ್ಕೆ ತಾವೇ ದೇವತೆಯಾದ್ದರಿಂದ ಏಳನೇ ಶ್ಲೋಕದಲ್ಲಿ ತಮ್ಮ ಸ್ವರೂಪ ತಿಳಿಸಿದ್ದಾರೆ. (ಅರ್ಥ– ಯಾರು ನನ್ನನ್ನು ಋಜುಗಣದವನೆಂದು ತಿಳಿದು ಸೇವಿಸುತ್ತಾನೆಯೋ ಆ ಪುಣ್ಯಕರ್ಮಿಯು ಪುನರಾವೃತ್ತಿ ರಹಿತವಾದ ಮೋಕ್ಷವನ್ನು ಕ್ರಮವಾಗಿ ಹೊಂದುತ್ತಾನೆ.) ಇದು ದುಷ್ಟ ಆತ್ಮಸ್ತುತಿಯಲ್ಲ , ಅಹಂಕಾರದಿಂದ ಆತ್ಮಸ್ತುತಿ ಮಾಡಿಕೊಳ್ಳಬಾರದು, ಯೋಗ್ಯ ಅಜ್ಞರಿಗೆ ಉಪದೇಶ ಮಾಡಲು ಆತ್ಮಮಹಿಮೆಯನ್ನು ಹೇಳುವುದು ಕರ್ತವ್ಯ ಎಂದಿದ್ದಾರೆ. ಅಧಿಕಾರಿಗಳಿಗೆ ಮಂತ್ರ ಜಪಿಸುವ ಶರಣಾಗತರ ಪರವಾಗಿ ತಾವು ತಪಸ್ಸು ಮಾಡುತ್ತಾರೆ. ಆ ತಮ್ಮ ತಪಸ್ಸಿನಿಂದ ಶಿಷ್ಯರ ಹರಿದ್ರೋಹ, ಗುರುದ್ರೋಹ, ಸುರದ್ರೋಹಗಳೆಲ್ಲಾ ಹೋಗುತ್ತವೆ. ತಮ್ಮ ಸ್ವರೂಪ ಮಹತ್ವ ತಿಳಿದವರಿಗೇ ಜ್ಞಾನವೃದ್ಧಿಯಾಗುತ್ತೆ ಎಂದು ತಿಳಿಸಿ ತಮ್ಮ ವಿಮಾನ ವರ್ಣನೆ ಮಾಡಿದ್ದಾರೆ. ಹಂಸವಾಹನಯುಕ್ತವಾದ ಆ ವಿಮಾನ ಧ್ಯಾನದಿಂದ ಪಾಪವು ಹೋಗುತ್ತದೆ. ಅಂತಹ ಅಧಿಕಾರಿಗಳಿಗೆ 20,21 ಮತ್ತು22ರಲ್ಲಿ ಧ್ಯಾನಶ್ಲೋಕ ಹೇಳಿದ್ದಾರೆ. ನಂತರ ಇದೇನು ಗ್ರಂಥ ? ಎಂದು ಉಪೇಕ್ಷೆ ಮಾಡಿದ ಶೇಷನೆಂಬ ಶಿಷ್ಯನು ಪಾಪದಿಂದ ಪತನ ಹೊಂದುತ್ತಾನೆಂದು ಹೇಳಿ, ಆದರೂ ಕ್ರಮವಾಗಿ ಶುದ್ಧಮಾಡಿ ಉದ್ಧರಿಸುತ್ತೇನೆ ಎಂದಿದ್ದಾರೆ(26). ಪಂಚವೃಂದಾವನದಲ್ಲಿ ಲಕ್ಷ್ಮೀಹಯಗ್ರೀವದೇವರ ಸನ್ನಿಧಾನದಲ್ಲಿ



ತಾವು ಸುಖಿ. ದೇವರೂ, ರಮಾದೇವಿಯರೂ ಅವರನ್ನು (ವಾದಿರಾಜ- ರನ್ನು) ಕೈಯಿಂದ ಮುಟ್ಟಿ ಆಶೀರ್ವದಿಸಿದ್ದಾರೆ. ಅವರು ಕಾಮಹೀನರು. ಕೈಲಾಸದಲ್ಲಿ ನರ್ತನ ನೋಡಿದಾಗಲೂ ನಿರ್ವಿಕಾರರು. ತಮಗೆ ಬ್ರಹ್ಮಲೋಕದಲ್ಲಿ ವಾಸ. ಅಲ್ಲಿ ಹಯಗ್ರೀವದೇವರ ಸಂತತ ದರ್ಶನ, ಸ್ವರ್ಗಕ್ಕೆ ಬಂದರೆ ಇಂದ್ರಾದಿಗಳಿಂದ ಪೂಜೆ, ಬೇಕಾದಾಗ ಶ್ವೇತದ್ವೀಪಾದಿ ಸರ್ವಲೋಕಗಳಿಗೂ ಹೋಗುತ್ತಾರೆ. ಹೀಗೆ ವಿಪ್ರನಿಗೆ ಹೇಳುವಾಗ ವಿಪ್ರನ ಜನ್ಮಾಂತರಸಂಬಂಧಿ ಲಕ್ಷ್ಮೀಪತಿಯು ಕಾಣಿಸಿಕೊಂಡ. ಅವನಿಗೂ ಸಹ ಉಪದೇಶಮಾಡಲು ಅದು 'ಲಕ್ಷ್ಮೀಪತಿ ಶ್ರೋತೃಕ ಪ್ರಕರಣ' ಎನಿಸಿತು. ಅವನಿಗೆ ಯೋಗ್ಯ ಉಪದೇಶ ಮಾಡುತ್ತಾರೆ. ''ಹೇ ಲಕ್ಷ್ಮೀಪತಿ ! ನನ್ನ ವೃಂದಾವನದಲ್ಲಿ ಸರ್ವ ದೇವತೆಗಳೂ ಇರುತ್ತಾರೆ. ಪಂಚ ಪರ್ವದಿನಗಳಲ್ಲಿ ಸೇವೆಯು ಸರ್ವಪಾಪನಾಶಕ. ಈ ರಹಸ್ಯವನ್ನು ನೀನು ತಿಳಿದು ಪುರಾಣ ಹೇಳು. ನನ್ನ ಈ ಆಖ್ಯಾನ ಸರ್ವೇಷ್ಟದಾತ್ರಿ ಎಂದು ತಿಳಿಸು. ಈ ಅದ್ಭುತ ಆಖ್ಯಾನವು ವಿಶ್ವಾಸವುಳ್ಳವರಿಗೆ ಫಲಪ್ರದ. ವಿಶ್ವಾಸಹೀನರಿಗೆ ಹೇಳಬೇಡ. ತಪಸ್ಸು ಮಾಡಿ ಈ ಆಖ್ಯಾನವನ್ನು ರಚಿಸಿರುತ್ತೇನೆ (50), ಹರಿಭಕ್ತಿ ಕೊಡುತ್ತೆ, ಗುರುಭಕ್ತಿ ಕೊಡುತ್ತೆ, ನನ್ನ ಮಹಿಮೆ ತಿಳಿಸಿ ಸರ್ವ ಸಾತ್ವಿಕ ಸುಖ ಕೊಡುತ್ತೆ. ಆದ್ದರಿಂದ ಸುದೃಢವಿಶ್ವಾಸ ಕೃತಿಯಲ್ಲಿ ಮಾಡಬೇಕು(60)''.

ಅನಂತರ ವಿಪ್ರಪ್ರಕರಣ. ಲಕ್ಷ್ಮೀಪತಿ ಕಾಣದವನಾದ. ವಿಪ್ರ ಒಬ್ಬನೇ ಉಳಿದ. ಗುರುರಾಜರು ಹೇಳುತ್ತಾರೆ. ''ದೇವರಾಜನಾದ ನನ್ನ ಪ್ರಸಾದದಿಂದ ಅಮರರಾಜನಾಗು. ನನ್ನ ಮಹಿಮೆಯ ಧ್ಯಾನಮಾಡು. ನಾನುಅಣಿಮಾದಿ ಅಷ್ಟಸಿದ್ಧಿಯುಳ್ಳವನು. ಕರ್ತುಂ, ಅಕರ್ತುಂ, ಅನ್ಯಥಾಕರ್ತುಂ ಸಮರ್ಥನಾದ ಅಚಿಂತ್ಯಶಕ್ತಿಯುಳ್ಳವನು. ಬೇಕಾದ ಸಂಪತ್ತನ್ನು ಕೊಡಬಲ್ಲೆ. ಕಲಿಯುಗ, ದುಡ್ಡುಕೊಟ್ಟರೆ ಕೆಟ್ಟುಹೋಗುತ್ತೀ ಎಂದು ಲೌಕಿಕ ಸಂಪತ್ತನ್ನು ಕೊಡುವುದಿಲ್ಲ,ನಾನು ವೈರಾಗ್ಯಪೂರ್ಣ. ನೀನೂ ವಿರಕ್ತನಾಗು, ನನ್ನ ದಂಡ ಬ್ರಹ್ಮಾಂಡ ಸೃಷ್ಟಿಮಾಡಬಲ್ಲದು. ನನ್ನ ಕೌಪೀನ, ಸೂತ್ರ, ಕಮಂಡಲು, ಕಂಬಳಿ ಮುಂತಾದ ವಸ್ತ್ರಾಭರಣಗಳು ದಿವ್ಯ, ದೇವರು ಅಥವಾ ದೇವತೆಗಳು ಕೊಟ್ಟಂತಹವು. ಅದ್ಭುತ ಶಕ್ತಿ ಉಳ್ಳವು. ಕೌಪೀನ ನಾರದರಿಗೂ ಕೊಡದೇ ನನಗೆ ಶ್ರೀಕೃಷ್ಣ ಕೊಟ್ಟ. ಕಂಬಳಿ ಶಂಭು ಕೊಟ್ಟಿದ್ದು. ಕುಂಭಾಸುರನು ಅವನನ್ನು ಆಕಾಶಕ್ಕೆ

ಎತ್ತಿ ಬಿಸಾಡಿದಾಗ ಬೀಳುತ್ತಿದ್ದ ಶಿವನನ್ನು ಹಿಡಿದುಕೊಂಡೆ. ಆ ಸಂತೋಷದಿಂದ ಅವನು ನನ್ನನ್ನು ಪೂಜಿಸಿದನು. ಪಾದಪೀಠ ವಿಶ್ವಕರ್ಮನು ದೇವರ ಆಜ್ಞಾಪ್ರಕಾರ ತಯಾರು ಮಾಡಿದ್ದು.

ನಾಲ್ಕನೇ ಕಶ್ಚಿದ್ ವಿಪ್ರೇಶಪ್ರಕರಣ 79ನೇ ಶ್ಲೋಕದಲ್ಲಿ, ಆಖ್ಯಾನದಲ್ಲಿ ವಿಶ್ವಾಸ ಹೀನರಿಗೆ ತೂತಿನ ಗಡಿಗೆಯಲ್ಲಿ ನೀರು ಹರಿದು ಹೋಗುವಂತೆ ಆಯುಸ್ಸೇ ನಷ್ಟವಾಗುತ್ತೆ ಎಂದಿದ್ದಾರೆ. ''ನೀನು ಎಲ್ಲರಿಗೂ ಹೇಳು. ನಂಬಿದವರು ಸಾಧುಗಳು. ನನ್ನ ದಯಾಪಾತ್ರರು ಈ ಆಖ್ಯಾನ (81) ವಿಪ್ರನ ಪ್ರಾಣವಿರುವವರಿಗೂ ಸತ್ಪ್ರಮಾಣಗಳಿಗೆ ಅವಿರುದ್ಧವಾಗಿ ಹೇಳುತ್ತೇನೆ. ನಂಬದಿದ್ದರೆ ನನಗೇನೂ ಕ್ರೋಧವಿಲ್ಲ. ನಾನು ಋಜು.'' ಎಂದಿದ್ದಾರೆ. ಆಖ್ಯಾನದ ಅವಿಶ್ವಾಸದಿಂದಲೇ ನಷ್ಟರಾಗುತ್ತಾರೆಂದು ಭಾವ.

ಕೊನೆಯ ಪ್ರಕರಣವು ವ್ಯಾಸಭಕ್ತನಾಮಕ ಲಕ್ಷ್ಮೀಪತಿ ಪ್ರಕರಣ– ಆತ ವ್ಯಾಸೋಪಾಸಕ. ವಾದಿರಾಜರು ಬಹುಪ್ರಮೇಯ ಅವನಿಗೆ ಹೇಳಿ, ವಿಪ್ರನ ಅನುಯಾಯಿಯನ್ನಾಗಿ ಮಾಡಿದ್ದಾರೆ. ''ಲಕ್ಷ್ಮೀಪತಿ ! ಈ ಬ್ರಾಹ್ಮಣನ ಮೂಲಕ ಸಚ್ಛಾಸ್ತ್ರವನ್ನೇ ಜಗತ್ತಿಗೆ ಹೇಳುತ್ತೇನೆ. ಹೊಟ್ಟೆಕಿಚ್ಚು ಮಾಡಬೇಡಿ. ಅವನು ಸೇವೆ ಮಾಡಿದ್ದಾನೆ. ಶರಣಾಗತ. ಅವನಿಗೇ ನಾನು ಒಲಿದಿರುವುದು. ಅವನಲ್ಲೇ ಆವಿಷ್ಟನಾಗಿ ಅವನಿಗೆ ಕಷ್ಟವೇ ಇಲ್ಲದಂತೆ ರಕ್ಷಿಸುತ್ತೇನೆ. ಅವನಿಗೇ ಸ್ವಪ್ನದರ್ಶನ'', ಹೀಗೆ ಹೇಳಿ ; ತಮಗೆ ಕುಂಡಲ, ಚಾಮರ, ಕೂಡುವ ಮಣೆ ಇವೆಲ್ಲಾ ಬಂದದ್ದನ್ನು ಹೇಳಿ ಪುನಃ ಆಖ್ಯಾನ ಗ್ರಂಥ(98) ಶತಾನಂದ ಮುಕುಂದಾವಸಿತಂ ಚವರ್ದ ಎಂದಿದ್ದಾರೆ. ಎಂದರೆ, ಈ ಕೃತಿಯು ಹರಿ ಮತ್ತು ಬ್ರಹ್ಮದೇವರು ಹೇಳಿದಂತೆ ನಾನು ತಯಾರುಮಾಡಿ ಪ್ರಚಾರಮಾಡಿದ್ದೇನೆ ಎಂದಿದ್ದಾರೆ. ''ದೇವರೇ ವಿಪ್ರನನ್ನು ರಕ್ಷಿಸು. ಅವನಿಂದ ಪ್ರಚಾರ'' ಎಂದಿದ್ದಾರೆ. ನಂತರ ಮುಕುಟಪ್ರಾಪ್ತಿ ಹೇಳಿದ್ದಾರೆ. ಆ ಆಭರಣಗಳೊಂದಿಗೆ ವಿಶಿಷ್ಟಾಧಿಕಾರಿಗಳು ತಮ್ಮ ಋಜುತ್ವವನ್ನು ನಂಬಿ ಧ್ಯಾನ ಮಾಡಿದರೆ ಯೋಗ್ಯಪದವಿ ಬರುತ್ತದೆ ಎಂದರ್ಥ. ಹೀಗೆ ಈ ಅಧ್ಯಾಯದಲ್ಲಿ ವಿಪ್ರನನ್ನು, ಅವನ ಸ್ನೇಹಿತರು ಭಕ್ತರೂ ಆದ ಅಧಿಕಾರಿ ದೇವತೆಗಳನ್ನೂ ಐಕಮತ್ಯ ಬರುವಂತೆ ಬೋಧಿಸಿದ್ದಾರೆ. ಮತ್ತು ತಮ್ಮ ಅಲಂಕಾರಯುಕ್ತ ಧ್ಯಾನವನ್ನು ಉಪದೇಶಿಸಿದ್ದಾರೆ. ವಿಪ್ರನ ಸ್ವರೂಪ, ತಮ್ಮ ಸ್ವರೂಪ



ಸಹ ತಿಳಿಸಿದ್ದಾರೆ. ॥ಶ್ರೀವಾದಿರಾಜಾಂತರ್ಗತ ಮಧ್ವೇಶಾಭಿನ್ನ ಶ್ರೀಕೃಷ್ಣಾರ್ಪಣಮಸ್ತು॥

## ನಾಲ್ಕನೇ ಅಧ್ಯಾಯ

ಆಖ್ಯಾನದ ಮೊದಲಿನ ನಾಲ್ಕು ಅಧ್ಯಾಯಗಳು ಭಜನಪರ್ವ. ಇಲ್ಲಿ ದೇವರು, ವಾದಿರಾಜರು, ಪಂಚವೃಂದಾವನಾದಿ ದೊಡ್ಡ ದೈವಿಕವಸ್ತುಗಳ ಸ್ವರೂಪಪ್ರಕಟನೆ ಆಗಿದೆ. ಅದಕ್ಕೆ ಭಜನೆ, ಇದು ಭಜನಪರ್ವದ ಕೊನೆಯ ಅಧ್ಯಾಯ. 96 ಶ್ಲೋಕ ನಾಲ್ಕು ಪ್ರಕರಣ. ಮೊದಲು ವಾದಿರಾಜಭಟ್ಟ ಪ್ರಕರಣ. ಈ ಬ್ರಾಹ್ಮಣರು ಒಬ್ಬ ಭಾವಿ ದಿಕ್ಪಾಲಕನೋ ಗ್ರಹವೋ ಋಷಿಯೋ ಅಂತೂ ಭಾವಿ ಇಂದ್ರಸಂಬಂಧಿ. ಅವರ ತಾಯಿ ವಾದಿರಾಜವೃಂದಾವನಸೇವೆ ಮಾಡಿದಮೇಲೆ ಅವರು ಹುಟ್ಟಿರಬಹುದು. ಈಗ (ಆಖ್ಯಾನ ಉಪದೇಶಕಾಲದಲ್ಲಿ) ಅವರು ಭೂಮಿಯಲ್ಲಿ ಹುಟ್ಟಿಯೇ ಇಲ್ಲ. ಅವರು ವೃಂದಾವನಾಚಾರ್ಯರ ಕಾಲದ ಒಬ್ಬರು ಮಠಾಧಿಪತಿಗಳು. ಈಗ ಸ್ವಪ್ನದಲ್ಲಿ ಕಾಣಿಸಿಕೊಳ್ಳುತ್ತಾರೆ. ವಾದಿರಾಜರು 'ದಾಸ್ಯಭಾವದಿಂದ ನನ್ನನ್ನು ಭಜಿಸು. ನನ್ನ ಮಂತ್ರ ಜಪಿಸು ಬೇರೆ ಪರೀಕ್ಷೆಮಾಡಬೇಡ. ನನ್ನ ಆಭರಣ ಧ್ಯಾನಮಾಡು ; ನೂಪುರ, ಅಂಗದ, ಕೇಯೂರ, ಕಟಕ, ಹಾರಾವಳಿ ಇವನ್ನೆಲ್ಲಾ ''ದೇವವರೋ ಮಯಿ ಪ್ರಭುಃ' ನನ್ನ ಹೃದಯದ ರಾಜ ದೇವರು ಧರಿಸುತ್ತಾನೆ. ನನ್ನ ಮಹಿಮೆ ತಿಳಿ ಗ್ರಂಥಪ್ರಕಾಶಕ ದ್ವಿಜನನ್ನು ಸೇವಿಸು. ನನ್ನ ಅನುಗ್ರಹದಿಂದ ಚಿನ್ನದ ಸಂಪುಟದ ದೇವರನ್ನು ಪೂಜಿಸಿಯೇ ವಿಪ್ರ ಸ್ವರ್ಗದ ರಾಜನಾಗುತ್ತಾನೆ. ರಮಾನಾರಾಯಣರು ನನಗೆ ಅನುಗ್ರಹಿಸಿದ್ದಾರೆ. ನಾನು ಸತ್ಯಲೋಕಕ್ಕೆ ಹೋಗುತ್ತಿದ್ದಾಗ ಒಬ್ಬ ದೈತ್ಯನನ್ನು ಕೊಂದೆ. ಎಲ್ಲ ದೇವತೆಗಳೂ ನನ್ನ ಜೊತೆಯಲ್ಲಿ ಬ್ರಹ್ಮದೇವರ ಬಳಿಗೆ ಬಂದು ಅವರ ಉಪದೇಶಕೇಳಿ ಸಂತುಷ್ಟಿ ಹೊಂದಿದರು. ನೀನೂ ನನ್ನ ಮಹತ್ವ ತಿಳಿದು ಆಜ್ಞೆಯಂತೆ ವಿಪ್ರನನ್ನು ಸಂಭಾವನೆ ಮಾಡಿ ಇತರರು ಪೂಜಿಸುವಂತೆ ನೋಡಿಕೋ. ವಿಪ್ರನನ್ನು ವೃಂದಾವನಾಚಾರ್ಯನೆಂದೇ ಕರೆಯಬೇಕು. ಅವನೇ ವೃಂದಾವನದ ಮಹಿಮೆಯಿಂದ ಜ್ಞಾನಿಯಾದವನು. ವೃಂದಾವನದ ಮಹಿಮೆ ಹೇಳುವ ಆಚಾರ್ಯರು.

ಹೀಗೆ 1820ಮೇಲೆ ನಡೆಯುವ ಭವಿಷ್ಯಗಳನ್ನು ನಿರೂಪಿಸಿ ವಿಪ್ರನಿಗೆ

ಧೈರ್ಯ ತುಂಬುತ್ತಾರೆ. ನಿನ್ನನ್ನು ಮುಂದೆ ಪ್ರವಚನಾಚಾರ್ಯನನ್ನಾಗಿ ಮಾಡುತ್ತೇನೆ. ಆಯುಸ್ಸು ಕೊಟ್ಟು ದಿವ್ಯಸಾಧನೆಯನ್ನು ನಿನ್ನಲ್ಲಿದ್ದು ಮಾಡಿಸುತ್ತೇನೆ ಎಂದಿದ್ದಾರೆ. ಮತ್ತೆ ಹಯಗ್ರೀವ ದೇವರು ಕಂಠಾಭರಣ ಕೊಟ್ಟ ವಿವರ. ಪಾದಾಂಗುಲೀಯ ಅನುಗ್ರಹಿಸಿದ್ದು ಇವೆಲ್ಲ ಹೇಳಿ ''ಆಭರಣವಿಷಯ ಶ್ರವಣಮಾಡಿದರೆ ಶ್ರೋತೃಗಳಿಗೆ ಸುಖಪ್ರಾಪ್ತಿಯಾಗುತ್ತೆ. ಸರ್ವ ಪುಣ್ಯಗಳನ್ನೂ ಪಂಡಿತರಿಗೆ ಒದಗಿಸುತ್ತೆ.'' (29) ಎಂದು ನಿರೂಪಿಸಿದ್ದಾರೆ. ಇಂದ್ರ ಎರಡು ಆನೆ ಕೊಟ್ಟಿದ್ದಾನೆ. ಕುದುರೆ ಕೊಟ್ಟಿದ್ದಾನೆ. ವಿಮಾನ ಮೊದಲೇ ಬಂದಿದೆ. ನಾನಾ ವಾಹನ ನಾನಾಪೂಜೆಗಳೂ ಆಗಿವೆ. ಎಷ್ಟು ಹೇಳುವುದು. ''ಮದ್ವೈಭವ ಸಮೋ ನಹಿ'' (44) ನನ್ನ ವೈಭವಕ್ಕೆ ಸಾಮ್ಯವೇ ಇಲ್ಲ. ಎಲ್ಲಾ ಹರಿಭಕ್ತಿ ಪ್ರಭಾವ. ವೈಭವ ಶ್ರವಣದಿಂದ (47) 'ಮದ್ಧಾಮಪದ್ಧತಿಂ ಯಾತಿ' ಅಧಿಕಾರಿ ನನ್ನ ಲೋಕಕ್ಕೆ ಬಂದು ಸೇರುತ್ತಾನೆ. ನಾನು ಬ್ರಹ್ಮವಾಯುಗಳ ಸಂಗಡ ಮಾತುಕತೆ ನಡೆಸುತ್ತೇನೆ. ರಮಾಪತಿ ಶ್ವೇತದ್ವೀಪದಲ್ಲಿ ಸಮುದ್ರದ ತೀರದಲ್ಲಿ ತನ್ನ ಕೈಯನ್ನು ನನ್ನ ತಲೆಯ ಮೇಲಿಟ್ಟಿದ್ದಾನೆ. ಆದ್ದರಿಂದ ಅನಂತ ವೈಭವ(ಯುತವಾದದ್ದು) ನನ್ನ ವೃಂದಾವನ. ವೈಷ್ಣವವೃಂದವನ್ನು ರಕ್ಷಿಸುತ್ತೆ ಎಂದಿದ್ದಾರೆ. ಅನಂತರ ಬೇರೆ ಪ್ರಕರಣ. ಹೇ ಲಕ್ಷ್ಮೀಪತಿ! ನನ್ನ ಆಖ್ಯಾನಕ್ಕೆ ಎರಡು ಅರ್ಥವಿದೆ. ನೀನು ಅರ್ಥಹೇಳಿ ಬ್ರಾಹ್ಮಣರನ್ನು ಸಂತೋಷಪಡಿಸು. ನಾನು ಬದರಿಗೆ ಹೋಗಿ ವೇದವ್ಯಾಸ- ರನ್ನು ನೋಡಿದ ಸಮಾಚಾರ ಹೇಳುತ್ತೇನೆ. ಅಲ್ಲಿ ವೇದವ್ಯಾಸರು ನನ್ನನ್ನು ಪ್ರಶಂಸಿಸಿ ಆನಂದ ಪಡಿಸಿದರು. ಹಸಿವೆ ನೀರಡಿಕೆ ತಪ್ಪಿಸುವ ಪುಷ್ಪಮಾಲಿಕೆ ಕೊಟ್ಟರು. ಕೈಯಿಂದ ಮುಟ್ಟಿದರು. ರಾಮಾಯಣ ಹೇಳಿದರು. ಪೂರ್ಣಪ್ರಜ್ಞರು ಸಂತೋಷಪಟ್ಟರು. ಇದನ್ನೆಲ್ಲಾ ಪ್ರಚಾರಮಾಡುವ ರಾಜಭೃತ್ಯಸದೃಶ ವಿಪ್ರ ಮುಮುಕ್ಷುಗಳಿಂದ ಮಾನ್ಯ. ಅವನ ದ್ರೋಹಿಗಳು ಪಿಶಾಚರಾಗುತ್ತಾರೆ. ಆದ್ದರಿಂದ ಜನರು ವಿಪ್ರನಿಗೆ ಸನ್ಮಾನ ಮಾಡಲಿ. (87) ಎಂದಿದ್ದಾರೆ. ಅಷ್ಟೇ ಅಲ್ಲ ವೇದವ್ಯಾಸರೇ ''ವಿಪ್ರಪೋಷ್ಯ ಹೇ ವಾದಿರಾಜ ಪಲ್ಲಕ್ಕಿಯಲ್ಲಿ ಉತ್ಸವಮಾಡಿಸಿ ನಿನ್ನ ಶುಭವಾರ್ತೆಯನ್ನು ಲೋಕಕ್ಕೆ ಹೇಳುವ ವಿಪ್ರನನ್ನು ರಕ್ಷಿಸು. ಅಭಯನೀಡಿ ಆತನ ದುಃಖಪರಿಹರಿಸು''(90) ಎಂದು ಆಜ್ಞೆಮಾಡಿದ್ದಾರೆ. ಇದರಿಂದ ವಾದಿರಾಜರ ವೈಭವ, ವಿಖ್ಯಾತಿ ಈ ದ್ವಿಜನಿಂದಲೇ ಎಂದರೆ



ವೃಂದಾವನಾಚಾರ್ಯರಿಂದಲೇ ಆಗಬೇಕೆಂದು ಹರೀಚ್ಛೆ ಎಂದು ಗೊತ್ತಾಗುತ್ತೆ. ನಂತರ ಫಲಶ್ರುತಿ. ಅಧ್ಯಾಯ ಸಮಾಪ್ತಿ. ಶ್ರೀವಾದಿರಾಜಾಂತರ್ಗತ ಮಧ್ವೇಶಾಭಿನ್ನ ಶ್ರೀಕೃಷ್ಣಾರ್ಪಣಮಸ್ತು.

## ಪಂಚಮೋಧ್ಯಾಯ

94 ಶ್ಲೋಕಗಳು. 10 ಪ್ರಕರಣಗಳು. ಬೇರೆ ಬೇರೆಯವರಿಗೆ ಭಿನ್ನ ಭಿನ್ನ ವಿಷಯ ಪ್ರಕರಣದಲ್ಲಿ ಹೇಳಿರುವುದರಿಂದ ಸಂಗತಿಯಿಲ್ಲ. ಪುನರುಕ್ತಿ ಇದೆ; ಹೀಗೆ ಅರ್ಥ ಗೊತ್ತಾಗುತ್ತಿರಲಿಲ್ಲ. ವೃಂದಾವನಾಚಾರ್ಯರು (1794ರಲ್ಲಿ) ಸೇವೆ ಮಾಡಿ ಸರ್ವಜ್ಞತೆ ಹೊಂದಿ ಹಿಂದಿನ ಜನ್ಮದ ಅನುಭವಸ್ಮರಿಸಿ ಅರ್ಥ ಹೇಳಿಕೊಟ್ಟಮೇಲೆ ಗೊತ್ತಾಯಿತು. ಆದ್ದರಿಂದ ಈ ವೃಂದಾವನಸೇವೆ ಸರ್ವಜ್ಞತೆ ಕೊಡಿಸಬಲ್ಲದು ಎಂದು ಆಖ್ಯಾನ, ಅದ್ಭುತ ಪ್ರಮಾಣಗ್ರಂಥ ಎಂದು ವ್ಯಕ್ತವಾಗಿದೆ. ಮೊದಲು ಈ ಆಖ್ಯಾನ ಅವಿಶ್ವಾಸ ಮಾಡುವ-ವರಿಗೆ ಬ್ರಾಹ್ಮಣ್ಯ ಹಾಳಾಗುತ್ತದೆ. ಗುರೂಪದೇಶಾನರ್ಹತ್ವ ಬರುತ್ತದೆ. ಹೀಗೆ ವೇದವ್ಯಾಸರು ಆಜ್ಞೆಮಾಡಿದ್ದಾರೆಂದು ವಾದಿರಾಜರು ಹೇಳಿ, ವೇದವ್ಯಾಸ ಸ್ವಾಮಿಯನ್ನು ಸ್ತುತಿಸಿದ್ದಾರೆ. ಆ ಸ್ವಾಮಿ ಕೃಪೆಯಿಂದ ಬದರೀಪ್ರಾಂತದ ಮುನಿಗಳೆಲ್ಲ ಗುಹ್ಯೇಂದ್ರಿಯ ನಿಗ್ರಹ ಮನಃಶುದ್ಧಿಗಳನ್ನು ವ್ಯಾಸಾಶ್ರಮದ ಸಾಮರ್ಥ್ಯದಿಂದ ಪಡೆದು ಶಾಂತರಾಗಿದ್ದಾರೆ. ಅಂತಹ ದೇವೋತ್ತಮ ವ್ಯಾಸರಿಗೆ ನಮಸ್ಕಾರ ಎಂದಿದ್ದಾರೆ. ಈ ರೀತಿ ಸ್ತುತಿಯಿಂದ ಎದುರಿಗೆ ವ್ಯಾಸಸನ್ನಿಧಿ ಹೊಂದಿದ ಪಂಚವೃಂದಾವನವು ವ್ಯಾಸಾಶ್ರಮವೇ. ಸಕಲಸಿದ್ಧಿ ದಾಯಕವೆಂದು ಸೂಚಿಸಿ ವೈಭವ ಪರ್ವ ಆರಂಭಿಸಿದ್ದಾರೆ. 5ರಿಂದ 11ನೇ ಅಧ್ಯಾಯ ಪೂರ್ತಿ ವೈಭವ ಪರ್ವ. ಪ್ರಥಮಾಧ್ಯಾಯ ಮಂಗಳಕ್ಕೆ ಸೇರಿಸಿ ಎಂಟು ಅಧ್ಯಾಯ ಆಗುತ್ತೆ. ನಂತರ ಲಕ್ಷ್ಮೀಪತಿಗೆ ಹೇಳುತ್ತಾರೆ- ''ನೀನು ಕೃತಿ ಪ್ರಚಾರ ಮಾಡು. ತ್ರಿವಿಧ ತಾಪನಾಶಕ ನನ್ನ ಮಹಿಮೆಯನ್ನು ಇತರರು ಹೇಳಲಾರರು. ಆ ಕಾರಣದಿಂದಲೂ ಕೃತಿ ನಾನೇ ಹೇಳಿದ್ದೇನೆಂದು ತಿಳಿ. ನಾನು ನಾನಾಶರೀರಮಾಡಿಕೊಂಡು ಬಹುರೂಪದಿಂದ ಇದ್ದು ವಿರಿಂಚತ್ವ ಎಂಬ ಸಹಭೋಗ (ಸತ್ಯಲೋಕಾಧಿಪತ್ಯವನ್ನು) ಹೊಂದಿ ನಂತರ ಮುಕ್ತನಾಗುತ್ತೇನೆ. ಈ ನನ್ನ ಮಹಿಮೆ ಪ್ರಚಾರಕನಿಗೂ ನನ್ನ ಲೋಕದ ಗತಿಯಾಗುತ್ತೆ.

ಈ ವೈಭವಪರ್ವೋಕ್ತ ಮಹಿಮೆ ಪರ್ವದಿನಗಳಲ್ಲಿ ಪಾರಾಯಣ ಮಾಡಿದರೆ ಇಷ್ಟಪ್ರಾಪ್ತಿ, ಕಷ್ಟಪರಿಹಾರ ಆಗುತ್ತದೆ. ನಾನು ಅಂತಹ ಹಯಗ್ರೀವಭಕ್ತ ಎಂದು ತಿಳಿ'' ಎಂದಿದ್ದಾರೆ. ಇದು ಸ್ಪಷ್ಟ ಋಜುಲಕ್ಷಣ. ನಂತರ ವಿಪ್ರನಿಗೆ 'ನನ್ನ ಮನ ಆದಿ ಇಂದ್ರಿಯಗಳು ನಿನ್ನ ಇಂದ್ರಿಯಗಳಲ್ಲಿದ್ದು ಕೆಲಸಮಾಡುತ್ತವೆ. ಹೀಗೆ ದಿನದಿನವೂ ಪ್ರೇರಣೆ ಭಕ್ತವಾತ್ಸಲ್ಯದಿಂದ' ಎಂದಿದ್ದಾರೆ. ಇವು ಮುಂದಿನ ಜನ್ಮದಲ್ಲಿ ನಡೆದಿವೆ. ಇಂತಹ ಪ್ರೇರಣೆ ಭಕ್ತರಿಗಾಗುತ್ತೆ ಎಂದು ಸೂಚಿಸಿ ''ಆದ್ದರಿಂದಲೇ ಈ ಆಖ್ಯಾನವು ಮುಕುಂದಾನಂದ ಕಾರಣ ಮಂದರಿಗೆ ಜ್ಞಾನಪ್ರದ. ವಿಪ್ರನಿಂದ ತಿಳಿದು ಶ್ರದ್ಧೆಯಿಂದ ಸ್ತುತಿಸಿದರೆ ಸರ್ವೇಷ್ಟ ಸಿದ್ಧಿ, ಅಣಿಮಾದಿ ಪ್ರಾಪ್ತಿಯೇ ಆಗುತ್ತೆ'' ಎಂದು ಹೇಳಿದ್ದಾರೆ.

ಈ ಆಖ್ಯಾನವನ್ನು ಶಿಲೆಯಲ್ಲಿ ಕೆತ್ತಿಸಿ, ಇಲ್ಲದಿದ್ದರೆ ಹಾರಿ ದೇವಲೋಕಕ್ಕೆ ಹೋಗುತ್ತೆ. ದೇವತೆಗಳು ಆನಂದೋದ್ರೇಕ ಸಾಧನೆಗೆ ಉಪಯೋಗಿಸಿಕೊಳ್ಳುತ್ತಾರೆ. ಮನುಷ್ಯರು ಸಾರ್ಥಕ ಮಾಡಿಕೊಳ್ಳದೇ ಉಪೇಕ್ಷಿಸಬಹುದೇ ? ನನ್ನ ಚರಮಾಜ್ಞಾ (will) ಎಂದು ತಿಳಿದು ಪಠಿಸಿ ನಾನು ದಶಾವತಾರರೂಪಿ ಶ್ರೀಹರಿಯನ್ನು ಒಲಿಸಿಕೊಂಡಿದ್ದೇನೆ. ಕರ್ಣಾಭರಣವ್ಯತ್ಯಾಸಮಾಡಿ ಉಪದೇಶಬಲಗಿವಿಯಲ್ಲಿ ಮಾಡಿದ್ದೇನೆ. ಯಾವ ಲೋಕಕ್ಕಾದರೂ ಕ್ಷಣದಲ್ಲಿ ಹೋಗುತ್ತೇನೆ. 'ಕರ್ತುಂ ಅಕರ್ತುಂ ಅನ್ಯಥಾಕರ್ತುಂ ಸಾಮರ್ಥ್ಯ ತುಂಬಿದೆ. ಸೂರ್ಯನ ರಥ ಏರಿ ಅರುಣನಿಂದ ಪೂಜಿತನಾಗಿ ಮತ್ತು ರಥದ ಮುಂದೆ ಹೋಗುತ್ತಾ, ದೇವರಿಂದ ವ್ಯಾಕರಣ ಕಲಿತಿದ್ದೇನೆ. ಅಣುವಿಗೆ ಅಣು, ಮಹತ್ತಿಗೆ ಮಹಾನ್ ಆಗಿದ್ದೇನೆ. ಶಿಂಶುಮಾರಸ್ವಾಮಿಯ ವರವನ್ನು ಸಂಪಾದಿಸಿ ಜ್ಯೋತಿ- ರ್ಮಂಡಲದಲ್ಲಿ ಎಲ್ಲ ದೇವತೆಗಳಿಗೂ ಬೋಧಿಸಿದ್ದೇನೆ. ನನ್ನ ತೇಜಸ್ಸು ದೇವತೆಗಳ ಕಣ್ಣನ್ನು ಮುಚ್ಚಿಸಿಬಿಟ್ಟಿತು (54) ಸೂರ್ಯನ ರಥದ ಮುಂದೆ ಕುಣಿದು ಆ ಮಂಡಲ ವರ್ತಿ ನಾರಾಯಣನಿಂದ ಭಕ್ತರಿಗಾಗಿ ವರಪಡೆದಿದ್ದೇನೆ. ದೇವರು ನನ್ನನ್ನು ಮುಟ್ಟಿ ಅನುಗ್ರಹ ಮಾಡಿದ. ''ಹೇ ಶೇಷ! ನೀನೂ ಹಾಗೆ ದೇವರ ಅನುಗ್ರಹ ಪಡಿ. ಆ ಸ್ವಾಮಿಯ ಅನುಗ್ರಹ ಸಂಪಾದಿಸದೇ ಬದುಕಿದ್ದಕ್ಕೆ ಏನು ಪ್ರಯೋಜನ ? ಗುರುವಾದ ನನ್ನನ್ನು ಅವಮಾನಮಾಡಬೇಡ. ಮಹತ್ವದ ಕೃತಿಯನ್ನು ಪ್ರಕಟಿಸುವ ವಿಪ್ರನಿಗೂ ಒಂದು ತುತ್ತು ಅನ್ನವನ್ನು ಕೊಡು. ಅನ್ನದಾನದ ಮಹಿಮೆಯನ್ನು ತಿಳಿದಿದ್ದಿ. ಅವನಿಗೆ



ಭೋಜನ ಮಾಡಿಸಿದರೆ ನನಗೆ ಅನ್ನ ಹಾಕಿದಂತಾಗುತ್ತದೆಂದು ತಿಳಿ. ಆಖ್ಯಾನದಲ್ಲಿ ಸಂಶಯ ಬೇಡ. ಸಂಶಯಕ್ಕೆ ಕಷ್ಟ ಕಾದಿದೆ. ಕೊನೆಗೂ ವಿಪ್ರನೇ ಗತಿ'' ಎಂದಿದ್ದಾರೆ. ಇದರಲ್ಲಿ ಗುರುರಾಜರ ಭಕ್ತರಸೇವೆಯಿಂದ ಅವರು ಸಂತುಷ್ಟರಾಗುವರೆಂದು ಸೂಚಿತವಾಗುತ್ತದೆ. ಮತ್ತು ಸನ್ನಿಧಾನದ ವಿಷಯವನ್ನೇ ಹೇಳುತ್ತಾರೆ ''ನಾನು ಅನೇಕ ಮೂರ್ತಿಸಂಯುಕ್ತನಾಗಿ ಹಯಗ್ರೀವ ಸೇವೆ ಮಾಡುತ್ತಾ , ಒಂದು ರೂಪದಿಂದ ವಿಪ್ರನಲ್ಲಿ ಪ್ರವಿಷ್ಟನಾಗಿ ಗ್ರಂಥ ಪ್ರಚಾರಕ್ಕೆ ಕಾರಣವಾಗಿದ್ದೇನೆ. ಇನ್ನೊಂದು ರೂಪದಿಂದ ಸ್ವಮಠದ ಸ್ವಾಮಿಗಳಲ್ಲಿ ಸನ್ನಿಹಿತನಾಗಿದ್ದೇನೆ. ಮತ್ತೊಂದು ವಿಶಿಷ್ಟರೂಪದಿಂದ ದೇವರ ವೃಂದಯುಕ್ತನಾಗಿ ನನ್ನ ವೃಂದಾವನದಲ್ಲಿ ಸನ್ನಿಹಿತನಾಗಿ ಸಾಧುಜನರಿಗೆ ಸರ್ವದಾ ಅಭೀಷ್ಟಗಳನ್ನು ಕೊಡುತ್ತಲೇ ಇರುತ್ತೇನೆ. ಐದನೆಯ ಅಧ್ಯಾಯ ಮುಗಿದಿದೆ.

ಶ್ರೀವಾದಿರಾಜಾಂತರ್ಗತ ಮಧ್ವೇಶಾಭಿನ್ನ ಕೃಷ್ಣಾರ್ಪಣಮಸ್ತು.

## ಷಷ್ಠ ಅಧ್ಯಾಯ

101 ಶ್ಲೋಕಗಳು. 5 ಪ್ರಕರಣಗಳು. ಈ ಅಧ್ಯಾಯದಲ್ಲಿ ಷಟ್‌ಪ್ರಶ್ನೋಪನಿಷತ್ತಿನಲ್ಲಿ ಹೇಳಿರುವ ಪ್ರಾಣದೇವರ ಮಹಿಮೆಯನ್ನು ವಾದಿರಾಜರು ತಮ್ಮಲ್ಲಿ ಹೇಳಿಕೊಂಡಿದ್ದಾರೆ. ''ಹೇ ಶೇಷ ! ಇಂದ್ರಲೋಕಕ್ಕೆ ಹೋಗಿದ್ದೆ. ಅಲ್ಲಿ ಇಂದ್ರದಂಪತಿಗಳು ಭಕ್ತಿಯಿಂದ ಪೂಜಿಸಿದರು. ಇನ್ನೊಂದು ರೂಪದಿಂದ ಮೇರುವಿನಲ್ಲಿ ಕಾಮರಹಿತನಾಗಿ ನಾರಾಯಣಾರ್ಚಕ, ಮತ್ತೊಂದು ರೂಪದಿಂದ ಕೈಲಾಸದ ವನದಲ್ಲಿ ತಪೋನಿರತನಾಗಿ ಹರಿಯಿಂದ ಪಾಲಿತನಾದೆ. ಶೇಷನೇ ! ಈ ಆಖ್ಯಾನವನ್ನು ಸಂಗೀತಕ್ಕೆ ಇಟ್ಟುಕೋ. ಇದರ ಮಹಿಮೆ ತಿಳಿ. ವಿಪ್ರನಲ್ಲಿ ನನ್ನ ಅನುಗ್ರಹ ಎಷ್ಟೆಂದು ಊಹಿಸು. ಕೃಚ್ಛ್ರಾ ಆತ್ ಮಮೈವ ನಾಸ್ತಿ (14) ''ಆ ವ್ಯಾಸಸ್ವಾಮಿಯ ಕೃಪೆಯಿಂದ ನನಗೆ ಕ್ಲೇಶವೇ ಇಲ್ಲ'' ಎಂದಿದ್ದಾರೆ. ಅನಂತರ ಗರ್ಗಾದಿ ಎಂಟು ಗುಂಪಿಗೆ ದೀರ್ಘಜ್ಞಾನವನ್ನು ಅನುಗ್ರಹಿಸಿದೆ ಎನ್ನುತ್ತಾರೆ. ಯಮ, ಪ್ರಚೇತ, ಕೆಲವು ಸ್ತ್ರೀಯರು, ಆತ್ರೇಯಾದಿಗಳು, ರತಿ, ಗುರು, ಊರ್ವಶ್ಯಾದಿ ಸ್ತ್ರೀಯರು, ವಾಸಿಷ್ಠ ಋಷಿಜನರು ಅದರಲ್ಲಿ ಯಮಲೋಕಕ್ಕೆ ಹೋಗಿದ್ದಾಗ ರಾಮದರ್ಶನದಿಂದ ಆನಂದ ಪಟ್ಟಿದ್ದಾರೆ. ಇವರ ಸೌಂದರ್ಯ ನೋಡಿ ಯಮ

ಆಶ್ಚರ್ಯ ಹೊಂದಿದ್ದಾನೆ. ಆಗ ನರಕದ ಕಡೆ ಹೋಗಿ ತನ್ನ ಲಕ್ಷಣಯುಕ್ತ ದೇಹದರ್ಶನದಿಂದ ಕೆಲವು ಸಜ್ಜನ ಪಾಪಿಗಳನ್ನು ಆಕರ್ಷಿಸಿ ಅವರಲ್ಲಿ ಪಶ್ಚಾತ್ತಾಪ ಹುಟ್ಟಿಸಿ ಯಾತನೆ ತಪ್ಪಿಸಿ ಸ್ವರ್ಗಕ್ಕೆ ಕಳುಹಿಸಿದ್ದಾರೆ. ಈ ನರಕೋತ್ತಾರ ಮಹಿಮೆಯ ಶ್ರವಣಮಾಡಿ ಭಕ್ತಿ ಮಾಡಿದರೆ ಕಾಮಾದಿಗಳಿಗೆ ಆಕರವಾದ ಸಂಸಾರ ಹೋಗಿ ಮುಕ್ತಿಯೇ ಆಗುತ್ತೆ. ಶ್ರವಣ ಎಂದರೆ ಈ ಆಖ್ಯಾನ ತಿಳಿಯೋಣ; ಎಂದಮೇಲೆ ಅದನ್ನು ನಂಬಬೇಕು. ''ಶೇಷ ! ನನಗೂ ಸ್ವಪ್ನವಾದರೆ ನಂಬುತ್ತೇನೆ ಎನ್ನಬೇಡ. ನಿಮಗೆಲ್ಲಾ ಆಗೋದಿಲ್ಲ. ವಿಪ್ರ ಸೇವೆ ಮಾಡಿದ್ದಾನೆ. ವರ ಹೊಂದಿದ್ದಾನೆ. ಅವನಿಗೇ ಸ್ವಪ್ನ ಆಗೋದು. ಕುಬುದ್ಧಿಯಿಂದ ಶಂಕೆ ಮಾಡಿದರೆ ಶಾಪ ಹೊಂದುತ್ತಾರೆ. ಮನುಷ್ಯನು ಹೆಂಡತಿ ಮಗ ಮಿತ್ರರ ಮಾತನ್ನು ನಂಬುತ್ತಾನೆ. ಸರ್ವಜ್ಞಗುರುಮಾತಿನಲ್ಲಿ ಅವಿಶ್ವಾಸ ಮಾಡೋದೇ ? ನನ್ನ ಶ್ಲೋಕಗಳೆಲ್ಲ- ವನ್ನು ಹಾಡುತ್ತಾ ಪಠಿಸುತ್ತಾ ಇರುವವನಿಗೆ ''ಶೋಕಮೂಲಸ್ಯ ನಾಶಕಾಃ'' ದುಃಖ- ಕಾರಣವಾದ ಪಾಪವನ್ನೇ ಸುಟ್ಟು ಮನಸ್ಸಿನಲ್ಲಿ ಉತ್ಸಾಹ ಹುಟ್ಟಿಸಿ ದೇವರಲ್ಲಿ ಭಕ್ತಿ ಕೊಡುತ್ತದೆ. ಆದ್ದರಿಂದ ವಿಪ್ರನಂತೆ ನಿರ್ಮಲಾಂತಃಕರಣದಿಂದ ನಂಬಿ ಪಠಿಸು. ಶಂಕೆ ಮಾಡಬೇಡ.'' ''ವಿಪ್ರನೇ ! ನೀನು ಜನರು ಶಂಕಿಸುತ್ತಾರೆಂದು ಗಾಬರಿ ಪಡಬೇಡ. ನೀನು ನಿನ್ನ ಗುರುವನ್ನು ನಂಬು. ಹಾಗೆಯೇ ಸೀತಾಪತಿ, ಲಕ್ಷ್ಮೀಪತಿ, ಶೇಷನಿಗೆ ತಿಳಿಸು. ನಿನ್ನನ್ನು ನಾಲ್ಕು ಜನ ನಂಬಿದರೆ ಸಾಕು. ಅದೇ ಸ್ವರ್ಣಲಾಭ ಎನ್ನುತ್ತಾರೆ''.

ಇನ್ನು ವೇದನಿಧಿಗಳಿಗೆ ಹೇಳುತ್ತಾರೆ. 'ನೀನಾದರೋ ಅವಿಶ್ವಾಸಮಾಡದೇ ಕೃತಿಯನ್ನು ನಂಬು. ನಾನೂ ವಾಯುದೇವರಂತೆ ವಿಪ್ರನಿಗೆ ಆಯುಃ ಪ್ರೇರಕ. ನನ್ನ ಭಕ್ತರು ಸೌಭಾಗ್ಯ- ವಂತರಾಗಲಿ. ಕೃತಿಯಲ್ಲಿ ಸಂದೇಹ ಪಟ್ಟರೆ ಹುಲಿಕಂಡ ಗೋವಿನಂತೆ ಓಡಿಹೋಗುತ್ತೇನೆ. ಆದರೆ ಯಮಲೋಕದಲ್ಲಿದ್ದು ಆ ಸಂದೇಹ ಹುಟ್ಟಿಸಿದವರನ್ನು ಎಳೆದು ತರಿಸಿ ನರಕಕ್ಕೆ ಹಾಕಿಸುತ್ತೇನೆ. ಎಷ್ಟೋಜನ ದುಷ್ಟಶಂಕೆ ಮಾಡಿ ನರಕಕ್ಕೆ ಹೋಗಲಿಕ್ಕೇ ಹುಟ್ಟಿದ್ದಾರೆ. ಅಂತಹವರು ನಕ್ಕರೆ ನಗಲಿ ನೀನು ಹೆದರಬೇಡ. ಈ ವಿಪ್ರನಿಗೂ ನಿನಗೂ ಶುಭವಾಗುತ್ತೆ' ಎಂದಿದ್ದಾರೆ. ನಂತರ ಯೋಗ್ಯರಿಗೆ ಉಪದೇಶಮಾಡದೇ ಇರಬೇಡ ಎಂದು ವಿಪ್ರನಿಗೆ ಹೇಳಿ ವೇದನಿಧಿಗಳಿಗೆ ತಮ್ಮ



ವಾಯುತ್ವ ಸಾಮ್ಯವನ್ನು ವಿವರಿಸಿದ್ದಾರೆ. ''ಹೇ ನಂದನ- ಶ್ರೇಷ್ಠ ! ನಾನು ವೃಂದಾವನದಲ್ಲಿ ಸ್ಥಿತನಾದರೆ ದೇವತೆಗಳೆಲ್ಲರ ಜತೆಯಲ್ಲಿ ಶ್ರೀದೇವರು ಸ್ಥಿತನಾಗುತ್ತಾನೆ. ನಾನು ಅಲ್ಲಿಂದ ಹೊರಗೆ ಬಂದುಬಿಟ್ಟರೆ ದೇವ ಮುನಿಗಳೊಂದಿಗೆ ದೇವರು ತನ್ನ ಎಲ್ಲರೂಪಗಳೊಂದಿಗೆ ವೃಂದಾವನತ್ಯಾಗ ಮಾಡಿಬಿಡುತ್ತಾನೆ. ಈ ಅನ್ವಯ ವ್ಯತಿರೇಕ ಯಾರಿಗೆ ಇದೆ ? ನೋಡು. ನಿನ್ನ ವಿಶ್ವಾಸನೋಡಿಕೊಂಡು ಸನ್ನಿಧಾನ ಇಟ್ಟಿದ್ದೇನೆ. ನೀನೂ ಅವಿಶ್ವಾಸಮಾಡಿದರೆ ಬಿಡಲೇ ಬೇಕಾಗುತ್ತದೆ. ನಾನು ನಿನಗೂ ಶ್ವಾಸಪ್ರೇರಕನಾಗುವವನು. ಆದ್ದರಿಂದ ಶಂಕಾರಹಿತಶುದ್ಧವಿಶ್ವಾಸದಿಂದ ನನ್ನನ್ನು (ಟಿ- ಋಜುತ್ವವನ್ನು ಆಚ್ಛಾದಿಸಿ ಭಕ್ತಿ ಮಾಡಿದರೆ ಅಶುದ್ಧ ಭಕ್ತಿಯಾಗುತ್ತದೆ. ಅದು ಪಾಪಬೀಜ ಸನ್ನಿಧಾನನಾಶಕ ಎಂದು ಭಾವ) ಭಜಿಸಿ ಆಯುರ್ವೃದ್ಧಿ ಹೊಂದು ಸಹೋದರನ ದೆಸೆಯಿಂದ ಅಧಿಕಪ್ರೀತಿ ನಿನ್ನಲ್ಲಿಟ್ಟು ಜ್ಞಾನದಾತ ಆಗಿದ್ದೇನೆ. ಆಖ್ಯಾನ ಪ್ರತಿದಿನವೂ ಬರೆಯಿಸುತ್ತಾ ಭಕ್ತಿ ಹೆಚ್ಚಿಸಿಕೋ. ನಿನ್ನ ಆರಾಧನೆ(ನೀನುಮಾಡುವ ಪೂಜೆ) ನನಗೆ ಪ್ರಿಯ. ಎಲ್ಲೂ ಹೋಗದೇ ಇಲ್ಲೇ ಇರುತ್ತೇನೆ' ಎಂದಿದ್ದಾರೆ. ಮತ್ತೆ 'ಹಾಡುತ್ತಾ ಕಾಕೋದರ (ಸರ್ಪ) ಸ್ವಾರ್ಥಪ್ರಾಣಿ. ಕಪ್ಪೆ ನುಂಗಿ ಬಿಲದಲ್ಲಿ ಮರೆಯುತ್ತೆ. ಯಾರಾದರೂ ತಿಳಿದು ಕೊಲ್ಲುತ್ತಾರೆ. ಅಂತಹ ಸ್ವಾರ್ಥಿದುಷ್ಟರು ತಾವೂ ಕೆಟ್ಟು ನನ್ನ ಭಕ್ತರನ್ನು ದುಷ್ಟಶಂಕಾ ವುಳ್ಳವರನ್ನಾಗಿ ಮಾಡುತ್ತಾರೆ. ನನ್ನ ಸನ್ನಿಧಾನ ಸ್ಥಳಗಳು ಮುಖ್ಯವಾಗಿ ಮೂರು. ಈ ವಿಪ್ರ, ವೇದನಿಧಿಯಾದ ನೀನು, ವೃಂದಾವನ. ಇವು ಒಂದಕ್ಕಿಂತ ಒಂದು ಹೆಚ್ಚು. ವಿಪ್ರನಿಗಿಂತ ವೇದನಿಧಿಯಲ್ಲಿ ಅಧಿಕ ಸನ್ನಿಧಾನ. ವೇದನಿಧಿಗಳಿಂದ ಅಪಾರಸನ್ನಿಧಾನ ವೃಂದಾವನದಲ್ಲಿ. ನೀನು ಶಂಕಾಮಾಡದೇ ವೃಂದಾವನ ಪೂಜೆ ಮಾಡು. ಕುಬೇರ ನನ್ನನ್ನು ಪೂಜಿಸಿ ''ನೀವು ಭಾರತೀಪತಿಯಂತೆ ಸಮರ್ಥರೆಂದು'' ಸ್ತುತಿಸಿದ್ದಾನೆ. ನಂತರ ವರುಣ ನಿರ್ಋತಿ ಸಹ ಪೂಜೆ ಮಾಡಿದ್ದಾರೆ. ಅವರೆಲ್ಲಾ ನನ್ನ ಸ್ವರೂಪ ತಿಳಿದಿದ್ದಾರೆ'' ಎಂದಿದ್ದಾರೆ. ನಂತರ ಮಂಗಳ. ಹೀಗೆ ಋಜುತ್ವಲಿಂಗಗಳು ಈ ಅಧ್ಯಾಯದಲ್ಲಿ ಸ್ಪಷ್ಟವಾಗಿವೆ. ಶ್ರೀವಾದಿರಾಜಾಂತರ್ಗತ ಮಧ್ವೇಶಾಭಿನ್ನ ಶ್ರೀಕೃಷ್ಣಾರ್ಪಣಮಸ್ತು.

## ಸಪ್ತಮೋಽಧ್ಯಾಯ

ಏಳನೇ ಅಧ್ಯಾಯದಲ್ಲಿ 132ಶ್ಲೋಕ. 7ಪ್ರಕರಣಗಳು ಇವೆ. ಮೊದಲು ವೇದನಿಧಿಗಳಿಗೆ ಹೇಳುತ್ತಾರೆ. 'ಸತ್ಯಲೋಕಕ್ಕೆ ಹೋಗಿದ್ದೆ. ಅಲ್ಲಿ ಹಯಗ್ರೀವದೇವರ ಸೇವೆಗೆ ಹೋಗಿದ್ದಾಗ ಸ್ವಾಮಿಯು ''ಕೇಳು'' ಎಂದು ಹೇಳಿ ಉತ್ಸಾಹದಿಂದ ಎಲ್ಲಾ ವೇದಾರ್ಥವನ್ನು ಉಪದೇಶಿಸಿದನು. ನಾನು ಭಕ್ತಿಯಿಂದ ಒಂದುಸಾವಿರ ಶ್ಲೋಕಗಳಲ್ಲಿ ದೇವರು ಹೇಳಿದ್ದನ್ನು ಅನುವಾದ ಮಾಡಿದೆ. ''ಇದೊಂದು ಪದ್ಮ ಚೆನ್ನಾಗಿದೆ ಪ್ರಚಾರಮಾಡು'' ಎಂದು ದೇವರು ಹೇಳಿದರು. ಅದನ್ನು ವಿಪ್ರನ ಸ್ವಪ್ನದಲ್ಲಿ ಹೇಳಿ ತುಂಬಾ ಗೋಪ್ಯವಿಷಯ ವನ್ನು ಹಾರಿಸಿ ಸಾಮಾನ್ಯವಿಷಯವನ್ನು ಬೆಳಿಗ್ಗೆ ಅವನಿಂದ ಹೇಳಿಸಿ ಬರೆಯಿಸಿದೆ' ಎಂದು ಹೇಳಿದ್ದಾರೆ. ಆದ್ದರಿಂದ ಆಖ್ಯಾನ ಹಯಗ್ರೀವ-ಬ್ರಹ್ಮವಿದ್ಯಾ, ಕೃತ್ರಿಮಶ್ಲೋಕಕ್ಕೆ ಹೋಲಿಸಬಾರದು. ''ಪ್ರತಿದಿನವೂ ಸ್ವಪ್ನದಲ್ಲಿ ಮನುಷ್ಯದರ್ಶನ ದೇವತೆಗಳಿಗೆ ನಿಷಿದ್ಧ. ನನ್ನ ನಿಃಸಂಗತೆಯಿಂದ ನನಗೆ ಬಂಧವಿಲ್ಲ. ಆದರೂ ಲೋಕಸಂಗ್ರಹಕ್ಕಾಗಿ ಧವಳಗಂಗೆ ಯಲ್ಲಿ ಸ್ನಾನಮಾಡುತ್ತೇನೆ. ಶಿಶ್ನೋದರಪರಾಯಣರ ಮಾತನ್ನು ಲಾಲಿಸಿ ನೀನು ಸಂಶಯ ಪಡಬೇಡ. ನನ್ನ ತಲೆಯಮೇಲೆ ಇಂದ್ರನೇ ಛತ್ರಿ ಹಿಡಿದಿದ್ದಾನೆ. ಧನ್ವಂತ್ರಿ ಉಪಾಸನೆ ಮಾಡುತ್ತಾ ಚಂದ್ರಮಂಡಲಕ್ಕೆ ಹೋಗಿದ್ದೆ. ಧನ್ವಂತರಿದೇವನು ನನಗೆ ಅಮೃತ ಕುಡಿಸಿ ದಿವ್ಯವಿಜ್ಞಾನವನ್ನು ಕೊಟ್ಟನು. (25/30) ಈ ಉಪದೇಶ ಮಧ್ವಮತದ ಸಾರ. ''ಹರಿಸರ್ವೋತ್ತಮ ಜಗತ್ತು ಸತ್ಯ ಹರಿಕೃತ. ದೈತ್ಯರು ಅದು ಮಿಥ್ಯಾ ಎಂದೂ, ವಿಷ್ಣು ಮಾಯಾಯುಕ್ತದೋಷಿಯೆಂದೂ ಹೇಳಿ ದ್ರೋಹಿಗಳಾಗುತ್ತಾರೆ'' ಎಂದು ಹೇಳಿದನು. ನಾನು ''ಹೇ ಅನಂತಪ್ರಭೋ'' ಎಂದು ಸ್ತುತಿಸಿದೆ. ಆ ಧನ್ವಂತರಿಯು ನನ್ನ ಹಿಂದಿನ ಜನ್ಮದಲ್ಲಿ ಶಿಶುಪಾಲ ನನಗೆ ಶಾಪಕೊಟ್ಟಿದ್ದರೂ ಅದರ ಪ್ರಸಕ್ತಿ ತಪ್ಪಿಸಿ ಜನ್ಮಾಂತರಕ್ಕೆ ತಳ್ಳಿ ಕೃಷ್ಣಪ್ರಸಾದ ನನಗಾಗುವಂತೆ ಹರಸಿದನು. ಸಂಸಾರದ ಮೃತಿಭಯ ನನಗಿಲ್ಲ. ವೇದನಿಧಿ ! ನನ್ನನ್ನು ಶರಣು ಹೊಂದು ಬದರಿಗೆ ಹೋಗಿದ್ದೆ. ಅಲ್ಲಿ ವೇದವ್ಯಾಸರಿಂದಲೂ ತತ್ವ ''ಸ್ಮಾರಿತವಾಯಿತು'' ಎಂದಿದ್ದಾರೆ. ಅದು ಋಜುಲಿಂಗ. ''ಶ್ರೋತವ್ಯಂ ಧರ್ಮ- ಸಾಧನಂ'' ಎಂದಿದೆ. ನಂತರ ವಿಪ್ರನಿಗೆ ಹೇಳುತ್ತಾರೆ. ''ನಾನು ಹೇಳುವುದನ್ನು ವ್ಯತ್ಯಾಸವಾಗಿ ಬರೆಯಿಸಿದರೆ ಪಾಪ. ಆ



ಪಾಪನಾಶಕ್ಕೆ ಸ್ವಂತಕಥೆಯನ್ನು ಹೇಳುತ್ತೇನೆ ಕೇಳು. ನಾಳೆ ಏನುಮಾಡುವುದು ಎಂಬ ಚಿಂತೆಯಿಂದ ನೀನು ತಪ್ಪು ಬರೆಸುತ್ತೀ. ಆಲೋಚನೆ ಬಿಡು. ದೇವರು ಸ್ವಾಮಿ ಅವನು ಮಾಡಿದಹಾಗೆ ಆಗುತ್ತೆ ! ನಾವು ಅಸ್ವತಂತ್ರರು. ದೇವರ ಆಜ್ಞೆಯಂತೆ ಬ್ರಹ್ಮದೇವರು ಸೃಷ್ಟಿಮಾಡುತ್ತಾರೆ. ರುದ್ರದೇವರು ಸಂಹಾರಮಾಡುತ್ತಾರೆ. ಸಾಕ್ಷಾತ್ ದೇವರೇ ಪಾಲನೆ ಮಾಡುತ್ತಾನೆ. ಅವನು ಸ್ವಾಮಿಯೆಂದು ಸದಾ ಮನಸ್ಸಿನಲ್ಲಿಡು. ಇನ್ನು ಕಥೆ ಕೇಳು. ದೇವತೆಗಳು ಒಮ್ಮೆ ಹರಿಯನ್ನು ಸಮೀಪಿಸಿ ಏನಾದರೂ ಹರಿಮಹಿಮೆ ಕೇಳಬೇಕೆಂದರು. ದೇವರು ಸಂಜ್ಞೆಮಾಡಿ ದೂರದಲ್ಲಿ ಕೂತಿದ್ದ ನನ್ನನ್ನು ತೋರಿಸಿದರು. ಗಂಧರ್ವರು 'ಇವರು ಹೇಳಬಲ್ಲರೇ?' ಎಂದು ಸಂಶಯಪಟ್ಟರು. ಅಷ್ಟಕ್ಕೆ ಪತಿತರಾಗಿ ಪಾಪಿಗಳಾದರು. ಭೂಮಿಯಲ್ಲಿ ಹುಟ್ಟ ಬೇಕಾಯಿತು. ''ಅಯ್ಯೋ ಅನ್ಯಾಯಮಾಡಿದೆವು'' ಎಂದು ಗಂಧರ್ವರು ಪಶ್ಚಾತ್ತಪ್ತರಾದರು. ಆಗ ದೇವತೆಗಳ ಸಂಗಡ ಗಂಧರ್ವರು ಬಂದು ನನ್ನನ್ನು ಶರಣು ಹೊಂದಿದರು. ಆಗ ನಾನು ಅನುಗ್ರಹಮಾಡಿದೆ. ''ಗಂಧರ್ವರಿಗೆ ಭೂಮಿಯಲ್ಲಿ ಹುಟ್ಟಿದಾಗ ರಾಜ್ಯಚ್ಯುತಿ ಪ್ರಸಕ್ತವಾಗುತ್ತದೆ. ಆಗ ದೇವರಿಗೆ ಹೇಳಿ ಗಂಧರ್ವರಿಗೆ ರಾಜ್ಯ ಪ್ರಾಪ್ತಿಯಾಗುವಂತೆ ಮಾಡುತ್ತೇನೆ. ನೀವುಗಳು ಭೂಮಿಯಲ್ಲಿ ಅಹಂಕಾರ ಬಿಟ್ಟು ಆಖ್ಯಾನ ಶ್ರವಣಮಾಡಿ ವೃಂದಾವನಸೇವಿಸಿ ವೃಂದಾವನಸ್ಥ ರಾಮನದಯೆಯಿಂದ ಶುಭವಾಗುತ್ತದೆ' ಎಂದೆ. ಗುರೂಕ್ತಿಯಲ್ಲಿ ಸಂಶಯ ಕೂಡದು. ಶೇಷನಿಗೆ ಸ್ವಲ್ಪ ಸಂಶಯ. ಲಕ್ಷ್ಮೀಪತಿ ಸೀತಾಪತಿಯರಿಗೆ ಸಂಶಯವಿಲ್ಲ. ಗುರುಪ್ರಸಾದಾನುಸಾರ ಶಿಷ್ಯನಿಗೆ ಸಿದ್ಧಿಯುಂಟಾಗುತ್ತದೆ. ನಾನೇ ಗುರು. ನನ್ನ ಪ್ರಸಾದದಿಂದಲೇ ಸಾಧನೆ. (ವಾದಿರಾಜರನ್ನು ಏಕೆ ಶರಣು ಹೊಂದಬೇಕು ? ಮಧ್ವಾಚಾರ್ಯರೇ ಸಾಕು. ಮಧ್ಯೆ ಇವರದ್ದೇನು? ಎಂದು ಪ್ರತಿಷ್ಠೆ ಮಾಡಿದರೆ ವೇದಗುಹ್ಯ ತಿಳಿಯದ ಮೂಢ ಎನ್ನಿಸುತ್ತಾನೆ). ಆದ್ದರಿಂದ ನನ್ನ ಪ್ರಸಾದ ಸಂಪಾದಿಸಿ ವಿಬುಧೇಶ್ವರ ಮಧ್ವಾಂತರ್ಯಾಮಿ ಹರಿಯನ್ನು ಉಪಾಸನೆ ಮಾಡುವವರಿಗೆ ನಿರ್ವಿಘ್ನಸಾಧನ ಎಂದು ಭಾವ. ಹಾಗೇ ಶ್ರೀ ಹಯಗ್ರೀವ ನನಗೆ ಒಲಿದಿದ್ದಾನೆ. ನಾನು ಅನಂತಾಸನಕ್ಕೂ ಬೇಕಾದಾಗ ಹೋಗುತ್ತೇನೆ ಎಂದಿದ್ದಾರೆ. ಕೊನೆಯಲ್ಲಿ ಮತ್ತೆ ವೇದನಿಧಿಗಳಿಗೆ ಹೇಳುತ್ತಾ

ಹೇ ಪ್ರಿಯ ! ನನ್ನ ಮೂರು ಮಾತನ್ನು ನಡೆಯಿಸಿಕೊಡು. ಗುರುಪದ್ಯಗಳನ್ನು ಅಧ್ಯಾಯಗಳನ್ನಾಗಿ ಮಾಡು. ವೃದ್ಧನನ್ನು ಅಂಗೀಕರಿಸು. ಆಖ್ಯಾನವನ್ನು ಶಿಲಾಸ್ಥವನ್ನಾಗಿ ಮಾಡು. ನಿನಗೆ ಕೃಷ್ಣ ಅನೇಕ ಜನ್ಮಗಳಲ್ಲಿ ಪಾಲಕನಾಗಿರುತ್ತಾನೆ'' ಎಂದಿದ್ದಾರೆ. (87) ಬ್ರಹ್ಮಾಂಡದ ಸರ್ವ ಅಧಿಕಾರಿಗಳಿಗೂ ಮಾಂಡವ್ಯ ವಿರಚಿತ ಅನ್ನ ಈ ಆಖ್ಯಾನ. ಶೌಂಡಲ್ಯನ ಕಾರ್ಯದಂತೆ ವ್ಯಾಖ್ಯಾನ ಯುಕ್ತವಾಗುತ್ತದೆ. ಅನ್ನವನ್ನು ಚಿತ್ರಾನ್ನ ಮಾಡಿ ಬಡಿಸಿದಂತೆ ಕೌಂಡಿಣ್ಯನ ವ್ಯಾಪಾರ ಸೇರಿ ಉಪದಿಷ್ಟವಾಗುತ್ತದೆ. ಈ ಆಖ್ಯಾನ. ನಂತರ ಕೃಷ್ಣಾರ್ಪಿತ ಹೋಮದಂತೆ ಸ್ವರೂಪೋ- ದ್ಧಾರಕ ಗುರುಅನುಗ್ರಹದಿಂದ ಅವರವರ ಉಪಾಸ್ಯ ಮೂರ್ತಿ ಪಾರಾಯಣಶ್ಲೋಕ ತಿಳಿದು, ಉಪಾಸನೆ ಮಾಡಲು ಅಧಿಕಾರಿ ಜ್ಞಾನಿಯಾಗಿ ಮುಕ್ತನಾಗುತ್ತಾನೆ. ಆಗ ನನಗೆ ಊಟಮಾಡಿದಂತೆ ಸಂತೋಷ. ''ಮಮಭೋಜನಸಂತೋಷಮ್'' 96ಶ್ಲೋಕಮುಖ್ಯ ಇದರ ಪಾರಾಯಣ, ಆಖ್ಯಾನದ ಪಠಣದಿಂದ ಅಧಿಕಾರಿಗೆ ಅನ್ನಪ್ರಾಪ್ತಿ, ನನಗೆ ದೇವರ ಆಜ್ಞಾಪಾಲನದ ಸಂತೋಷ. ವೇದನಿಧಿ ! ಮೂರು ಕಾರ್ಯ ಆದರೆ ನನ್ನ ಸಂಕಲ್ಪ ನೆರವೇರುತ್ತೆ, ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡು. ನೀನು ಪುತ್ರ ಎಂದು ಎನ್ನಿಸುತ್ತೀ. ಸೀತಾಪತಿ ನೀನು ಜ್ಞಾಪಿಸಿ ಅವನಿಂದ ಕಾರ್ಯಕ್ರಮಮಾಡಿಸು. ಅಂತೂ ಈ ಆಖ್ಯಾನ ವಾಕ್ಯ 'ಅಗ್ನಿಸನ್ನಿಭಂ' ಸಂಸಾರತಾಪವೆಂಬ ಹತ್ತಿಗೆ ಅಗ್ನಿ ಎಂದಿದ್ದಾರೆ. ''ಇನ್ನು ನೈಮಿಷಾರಣ್ಯಕ್ಕೆ ಹೋಗುತ್ತೇನೆ. ಈ ಕಾರ್ಯತ್ರಯ ಬೇಗ ಆಗಲಿ ಎಂದು ಹೇಳಿದ್ದಾರೆ. ನಂತರ ಮಂಗಳ ಶ್ಲೋಕಗಳು. ಹೀಗೆ ಈ ಅಧ್ಯಾಯದಲ್ಲಿ ಗುರುರಾಜರು ಸರ್ವ ಅಧಿಕಾರಿಗಳಿಗೂ ಸಾಧನೆ ಮಾಡಿಸತಕ್ಕವರೆಂದು ಆ ಕಾರ್ಯಕ್ಕೆ ಅಂಗವಾಗಿ ಆಖ್ಯಾನ ರಚಿಸಿದ್ದಾರೆಂದು ಸೂಚಿತವಾಗುತ್ತದೆ. ಶ್ರೀವಾದಿರಾಜಾಂತರ್ಗತ ಮಧ್ವೇಶಾಭಿನ್ನ ಶ್ರೀಕೃಷ್ಣಾರ್ಪಣಮಸ್ತು.

## ಅಷ್ಟಮೋಧ್ಯಾಯ

ಅಷ್ಟಮೋಧ್ಯಾಯದಲ್ಲಿ 106 ಶ್ಲೋಕಗಳು. ಮೂರು ಪ್ರಕರಣಗಳಿವೆ. ''ತುಂಗಭದ್ರಾ ನದೀತೀರ'' ''ನಾರಸಿಂಹ''ನ ಉದ್ಧಾರಕ್ಕೋಸ್ಕರ ತಪಸ್ಸು ಮಾಡಿದೆ. ಎರಡು ಭೂದಾನ ಬಂದಿದೆ ಎಂದು ಹೇಳಿದರು. ಮರುದಿನ ವಿಪ್ರ ಆ ದಾನಶ್ಲೋಕ ಬರೆಸಲಿಲ್ಲ,



ದತ್ತಾಪಹಾರ ದೋಷಪ್ರಸಕ್ತವಾಯಿತು. ಗುರುರಾಜರು ಆ ದೋಷವನ್ನು ತಮ್ಮ ಯೋಗದಿಂದ ಪರಿಹರಿಸಿದ್ದಾರೆ. ಹಾಗೆಯೇ 'ಜುಹ್ವಾ' ಎಂದು ಹೇಳಿದ್ದನ್ನು ಬರೆಯಿಸದೇ 'ದಹ' ಎಂದು ಬರೆಯಿಸಿದ್ದು ದೋಷ. ಅದನ್ನು ಪರಿಹರಿಸಿದ್ದಾರೆ. 'ದಹ ಎಂದರೆ ಸುಡುವುದು' ಎಂದರ್ಥ. ''ಮಂತ್ರಜ್ಞ ಅಶ್ಲೀಷ ಮಾತಾಡಬಾರದು. ಮಠದಲ್ಲೇ ಇರು. ಹೀಗೆ ದೋಷ ಬರುವುದಿಲ್ಲ'' ಎನ್ನುತ್ತಾರೆ.

ಇನ್ನು ವೈಭವ ಹೇಳುತ್ತಾರೆ. ''ಹಿಮವತ್ಪರ್ವತಕ್ಕೆ ಹೋಗಿದ್ದೆ. ಹಿಮವದ್ರಾಜ ಅವನ ಪತ್ನಿ ಮೇನಾದೇವಿ ಸಹ ರತ್ನಕೋಟಿ ಆರಿಸಿ ಅಭಿಷೇಕ ಮಾಡಿದ್ದಾರೆ. ಆಗ ಸೂರ್ಯ ಮೇಷದಲ್ಲಿದ್ದ. ಅಳಿಯ ರುದ್ರ ರತ್ನ ಆರಿಸಿ ಅಭಿಷೇಕಕ್ಕೆ ಕೊಟ್ಟು ಸಹಕರಿಸಿದನು'' ಇದರಿಂದ ರುದ್ರಪೂಜ್ಯತ್ವ ಸಿದ್ಧವಾಗುತ್ತದೆ. ಅಲ್ಲಿಂದ ಸ್ವರ್ಗ, ಅಲ್ಲಿಂದ ವೈಕುಂಠ, ವೈಕುಂಠದಿಂದ ಮಂದರಕ್ಕೆ ಬಂದು ಅಷ್ಟಬಾಹು ನಾರಾಯಣನನ್ನು ಕಂಡರು. ಅಲ್ಲಿ ಒಂದು ಸ್ತ್ರೀವ್ಯಕ್ತಿ ಇವರನ್ನು ಕಾಮಿಸಿ ದೇವರಿಂದ ವರ ಪಡೆದರೂ ಜನ್ಮಾಂತರದಲ್ಲಿ ಅವಳ ಪ್ರಾಪ್ತಿಯೆಂದು ಶ್ರೀಹರಿ ವ್ಯವಸ್ಥೆ ಮಾಡಿದ್ದಾನೆ. ಇವರ ಮನಸ್ಸು ಅಷ್ಟು ನಿಶ್ಚಲವಾಗಿತ್ತು, ದೇವರು ವಾದಿರಾಜರನ್ನು ಆಲಂಗಿಸಿಕೊಂಡುಬಿಟ್ಟರು. ಆ ಸುಂದರಿಯು ವಾದಿರಾಜರ ನಿರ್ವಿಕಾರತ್ವ ವ್ಯಕ್ತಮಾಡಿ ತಪಸ್ಸಿಗೆ ತೆರಳಿದಳು. ಇಷ್ಟು ಕಥೆ ಪಾರಾಯಣದಿಂದ ಮುಮುಕ್ಷು ತರುಣಾದಿಗಳಿಗೆ ಕಾಮವಿಕಾರತಪ್ಪಿ ಶಾಂತಿ ಬರುತ್ತದೆ. ಹೇ ಲಕ್ಷ್ಮೀಪತಿ ! 'ಈ ಮಹಿಮೆ ಪ್ರಚಾರಮಾಡು' ಎನ್ನುತ್ತಾರೆ. ನಾಲ್ಕು ಅಧ್ಯಾಯ ಪಾರಾಯಣ ಗಂಗಾಸ್ನಾನ ಫಲ, ಎಂಟು ಅಧ್ಯಾಯದಿಂದ ಇಷ್ಟಪ್ರಾಪ್ತಿ , ದ್ವಾದಶಾಧ್ಯಾಯದಿಂದ ಪಂಡಿತರಿಗೆ ಧ್ಯಾನಪ್ರಾಪ್ತಿ, ಹೀಗೆ ಫಲ ಹೇಳು. ನಾನು ವಿಮಾನದಿಂದ ಇಂದ್ರಲೋಕಕ್ಕೂ ಹಾಗೂ ಸೂರ್ಯಮಂಡಲಕ್ಕೂ ಹೋಗಿದ್ದೇನೆ. ಸರ್ವದಾ ಹರಿಸ್ಮೃತಿ ಮಾಡುತ್ತೇನೆ. ಸತ್ಯಲೋಕಕ್ಕೆ ಹೋಗುತ್ತಿರುವಾಗ ಹಿಂದೆ ಹೇಳಿದಂತೆ ದೈತ್ಯನನ್ನು ಕೊಂದು ಶ್ರುತಿಗೆ ಅಪಾರ್ಥ ಮಾಡುತ್ತಿದ್ದುದನ್ನು ತಪ್ಪಿಸಿದೆ. ಆಗ ಎಲ್ಲರಿಗೂ 'ಹರಿಸರ್ವೋತ್ತಮತ್ವವೇ ತತ್ವ. ಅದೇ ಶ್ರುತ್ಯರ್ಥ' ಎಂದು ಹೇಳಿದೆ. ನಾನು ಹೇಳಿದ್ದನ್ನು ನಂಬದೇ ಅಸುರರು ಕೃಷ್ಣನನ್ನು ಮಾನವನೆಂದು ತಿಳಿದರು. ದೇವತೆಗಳು ನನ್ನನ್ನು ನಂಬಿ ಸುಖಿಗಳಾದರು. ''ಮಮಾಽಪಿ ಜೀವೋತ್ತಮತ್ವಂ'' ನನ್ನ

ಜೀವೋತ್ತಮತ್ವವನ್ನು ದೇವತೆಗಳು ನಂಬಿದರು. ಯೋಗ್ಯತಾ ಪ್ರಭಾವದಿಂದ ಅಸುರರು ನಂಬಲಿಲ್ಲ. ನನ್ನ ಭಕ್ತರು ಸುಖಿಗಳಾಗಲಿ'' ಎಂದು ಹರಸಿದ್ದಾರೆ. (55)

''ಅನಂತರ ನಕ್ಷತ್ರಲೋಕಕ್ಕೆ ಹೋಗಿದ್ದೆ. ಅಲ್ಲಿನವರ ಕಣ್ಣು ನನ್ನ ಕಾಂತಿಯಿಂದ ಕೋರೈಸಿಹೋಯಿತು. ಎಲ್ಲರೂ ಭಿಕ್ಷೆಕೊಟ್ಟು ಪೂಜಿಸಿದರು. ನನ್ನ ವಾಕ್ಕಿಗೆ ಲಕ್ಷ್ಮೀದೇವಿಯೇ ಸಾಕ್ಷಾದ್ ಅಭಿಮಾನಿ'' ಎನ್ನುತ್ತಾರೆ. ಹೀಗೆ ಋಜುಲಕ್ಷಣಹೇಳಿ ಸಂಚಾರ ವರ್ಣಿಸುತ್ತಾರೆ. ''ಸೂರ್ಯನ ರಥಕ್ಕೆ ಹೋದೆ. ಅರುಣ'ಇಲ್ಲೇ ಇರಿ' ಎಂದು ಬೇಡಿದ. ಹಾಗೆಯೇ ವರುಣ ಮುಂತಾದ ದಿಕ್ಪಾಲಕರು ಆಗಲೇ ಕರೆದರು. ''ಕಾಂತ-ರೂಪಾಂತರೇಣ'' ಆಯಾಯ ದಿಕ್ಪಾಲಕರಿಗೆ ಅನುಗುಣವಾದ ಎಂಟು ರೂಪಗಳನ್ನು ಮಾಡಿಕೊಂಡು ಎಲ್ಲರ ಮನೆಗೂ ಹೋಗಿ ಅನುಗ್ರಹಿಸಿದೆ. ತ್ರಿಶೂಲೀರುದ್ರನು ಭಕ್ತಿಯಿಂದ ಆತಿಥ್ಯಮಾಡಿ ಅನುಗ್ರಹೀತನಾಗಿದ್ದಾನೆ'' ಎಂದಿದ್ದಾರೆ.

ಪುನಃ ವಿಪ್ರನನ್ನು ಕುರಿತು ''ವ್ಯತ್ಯಾಸಮಾಡಬೇಡ. ಮಂತ್ರರೂಪಗ್ರಂಥ'' ಎಂದು ಎಚ್ಚರಿಸಿದ್ದಾರೆ. ''ದಾಮೋದರ ಸ್ಮರಣೆ ಮಾಡಿದರೆ ಪ್ರಮಾದ ಹೋಗುತ್ತೆ, ಅವನೂ ನನ್ನ ವೃಂದಾವನದಲ್ಲಿದ್ದಾನೆ. ದೇವತೆಗಳನ್ನು ಅನುಗ್ರಹಿಸಿ ಮೂಲರೂಪದಿಂದ ಶ್ರೀದೇವರನ್ನು ಕಾಲುಕಟ್ಟಿಕೊಂಡು ಭಜಿಸುತ್ತೇನೆ. ವಾಮನಸ್ವಾಮಿ, ಉಪೇಂದ್ರ ನನ್ನನ್ನು ಅನುಗ್ರಹಿಸಿ ಅಶಂಕೆ ಮಾಡುವ ಕುಜನರನ್ನು ಸಂಹರಿಸುತ್ತಾನೆ'' ಎಂದು ಹೇಳಿದ್ದಾರೆ. (95)

''ಎಷ್ಟು ಹೇಳಬೇಕು?'' ಬ್ರಹ್ಮವಾಯುಗಳ ನಿತ್ಯ ಆವೇಶವು ನನ್ನಲ್ಲಿದೆ. ನಾನು ಸಾಮಾನ್ಯನಲ್ಲ. ''ಅಧಿಕಾರಿಷು ಸರ್ವೇಷು ಚಿತ್ತಮೋಹಂ ನ ಸಂಶಯಃ'' (ಸರ್ವ ಅಧಿಕಾರಿಗಳಲ್ಲಿ ನಾನು ಉತ್ತಮನು ಸಂಶಯವಿಲ್ಲ) ''ಈ ವಿಷಯ ತತ್ವದೇವತೆಗಳಿಗೆ, ಋಷಿಗಳಿಗೆ ತಿಳಿಯತ್ತೆ, 'ದಾನವಾ ಮಾನವಾಶ್ಚ ನ' (ದಾನವರು ಮಾನವರೂ ನನ್ನ ಋಜುಸ್ಥತ್ವವನ್ನು ನಂಬುವುದಿಲ್ಲ) ಎಂದೂ ಅವರೇ ಹೇಳಿದ್ದಾರೆ. ಪುನಃ ದ್ವಿಜನಿಗೆ ''ಹೇಳದೇ ಇದ್ದುದ್ದನ್ನು ಬರೆಯಿಸಬೇಡ'' ಎಂದಿದ್ದಾರೆ. ಮಂತ್ರತ್ವ ಹೋಗುತ್ತದೆಂದು ಭಾವ. ಹೀಗೆ ಈ ಅಧ್ಯಾಯದಲ್ಲಿ ಹರಿಸರ್ವೋತ್ತಮತ್ವ ಸ್ಪಷ್ಟವಾಗಿದೆ. ವಾದಿರಾಜರ ಜೀವೋತ್ತಮತ್ವ ಮೂರು ನಾಲ್ಕು ರೀತಿಯಿಂದ ಹೇಳಲ್ಪಟ್ಟಿದೆ.



ಶ್ರೀವಾದಿರಾಜಾಂತರ್ಗತ ಮಧ್ವೇಶಾಭಿನ್ನ ಶ್ರೀಕೃಷ್ಣಾರ್ಪಣಮಸ್ತು.

## ನವಮಾಧ್ಯಾಯ

ಶ್ರೀಗುರುರಾಜೋವಿಜಯತೇ ॥ ನವಮಾಧ್ಯಾಯದಲ್ಲಿ 105 ಶ್ಲೋಕಗಳು. ಮೂರುಪ್ರಕರಣಗಳು. ರಾಮಾಯಣದಲ್ಲಿ ಸುಂದರಕಾಂಡದಂತೆ ಆಖ್ಯಾನದಲ್ಲಿ ಈ ಅಧ್ಯಾಯ ಮನೋಹರ. ಹನುಮ, ಭೀಮ, ಮಧ್ವಸಾದೃಶ್ಯವನ್ನು ವಾದಿರಾಜರು ತೋರಿಸಿಕೊಂಡಿದ್ದಾರೆ. ಹನುಮಂತನು ಇದೊಂದು ಯಜ್ಞ ಎಂದು ತಿಳಿದು ಅಕ್ಷಕುಮಾರಾದಿ ರಾಕ್ಷಸರನ್ನು ಕೊಂದನು. ನಿಷ್ಕಾಮಸೇವೆ ರಾಮನಿಗೆ ಮಾಡಿದನು. ಆ ರಾಮದೇವರು ಅವನನ್ನು ಪ್ರೀತಿಯಿಂದ ಆಲಂಗಿಸಿಕೊಂಡರು. ಹಾಗೆಯೇ ನನ್ನನ್ನೂ ಅಷ್ಟಬಾಹು ನಾರಾಯಣ ಮಂದರಪರ್ವತದಲ್ಲಿ ತಬ್ಬಿಕೊಂಡಿದ್ದಾನೆ. ಮುಂದಿನ ಜನ್ಮದಲ್ಲಿ ಆಧಾರಳನ್ನು ನನ್ನಿಂದ ಯೋಗಮಾಡಿ ಸುಖಪಡಿಸುತ್ತಾನೆ. ಈಗ ನನ್ನ ನಿಷ್ಕಾಮತೆಯಿಂದ ಸಂತೋಷಪಟ್ಟ ಸ್ವಾಮಿ ನನ್ನನ್ನು ತನ್ನ ಜೊತೆಯಲ್ಲಿ ಗರುಡನ ಮೇಲೆ ಕೂಡಿಸಿಕೊಂಡು ನಿಮಿಷಮಾತ್ರದಲ್ಲಿ ಮೇರು ಪರ್ವತದ ಶಿಖರಕ್ಕೆ ಬಂದನು. ಅಲ್ಲಿಂದ ಮಂದರಕ್ಕೆ ಬಂದ. ಅಲ್ಲಿಂದ ಶ್ವೇತದ್ವೀಪಕ್ಕೆ ಅಲ್ಲಿಂದ ಪ್ಲಕ್ಷದ್ವೀಪಕ್ಕೆ ಬಂದ. ಅಲ್ಲಿ ನನ್ನನ್ನು ಇಳಿಸಿ ಗರುಡನನ್ನು ಸ್ವರ್ಗಕ್ಕೆ ಕಳುಹಿಸಿ ಅಮೃತ ತರಿಸಿ ನನಗೆ ಕುಡಿಸಿದನು. ಕುಡಿಸಿ ಉಳಿದಿದ್ದನ್ನು ಗರುಡದೇವರ ಸಮೀಪದಲ್ಲಿ ಇಟ್ಟ. ಆ ದೇವರು ಅದನ್ನೂ ನನಗೆ ''ಗೋಸವೇ ಗೋಸವೇ'' ಭಿಕ್ಷಾ ಕಾಲಗಳಲ್ಲಿ ತಾನೇ ಕುಡಿಸಿಬಿಟ್ಟನು. ಈ ಮಹಿಮೆ ಜ್ಞಾನಮುಕ್ತಿಗೆ ಸೋಪಾನ.

ಅನಂತರ ದೇವರು ಅಲ್ಲಿಂದ ಉಪಪ್ಲಾವ್ಯಕ್ಕೆ ಬಂದು ಅಲ್ಲಿಂದ ಅನಂತಾಸನಕ್ಕೆ ಬಂದನು ಅಲ್ಲಿ ತನ್ನ ರೂಪದಿಂದ ಏಕೀಭಾವವನ್ನು ಹೊಂದಿ ನನಗೆ ಸಂತೋಷಪಡಿಸಿ ಕಳುಹಿಸಿದನು. ಇಂದ್ರದಂಪತಿಗಳು ನನ್ನನ್ನು ಕರೆದು ಉಪೇಂದ್ರ ದಂಪತಿಗಳ ಸಮಕ್ಷಮ ಆರತಿ ಮಾಡಿ ಆಖ್ಯಾನವನ್ನು ಭದ್ರಾಸನದಲ್ಲಿಟ್ಟು ಅರುಂಧತ್ಯಾದಿ ಸ್ತ್ರೀಯರೊಂದಿಗೆ ಆರತಿ ಮಾಡಿದರು. ಎಲ್ಲಾ ದೇವಸ್ತ್ರೀಯರೂ ಹಾಗೆ ಮಾಡಿದ್ದಾರೆ. ಮನುಷ್ಯರೂ ಹಾಗೆಯೇ ಮಾಡಲಿ. ಆಖ್ಯಾನ ಪ್ರಚಾರಕ ವಿಪ್ರನನ್ನು ಮಾನಿಸಲಿ ಎಂದಿದ್ದಾರೆ.

ಇನ್ನು ತಮ್ಮ ಅಣಿಮಾದಿ ಸಿದ್ಧಿ ಶರೀರಶುದ್ಧಿ ಮುಂತಾದ ಮಹಿಮೆ ವಿವರಿಸುತ್ತಾರೆ. ಬಲಗೈಯಿಂದ ಊರ್ಧ್ವಾಂಡಮುಟ್ಟುತ್ತೇನೆ. ಎಡಗೈಯಿಂದ ಕೆಳಗಿನ ಖರ್ಪರ ಮುಟ್ಟಬಲ್ಲೆ. ತ್ರಸರೇಣುವಿಗಿಂತ ಸೂಕ್ಷ್ಮವಾಗಬಲ್ಲೆ. ಸೌಭರಿಯಂತೆ ನಾನಾದೇಹ ಧರಿಸಬಲ್ಲೆ. ಹಾಗೆಯೇ ಮಣಿಮಂತನನ್ನು ಜಜ್ಜಿ ಹಾಕಬಲ್ಲೆ. ಆಚಾರ್ಯರು ಸರ್ಪರೂಪದ ಆ ದೈತ್ಯನನ್ನು ಕಾಲಿನಿಂದ ವರೆಸಿದರು. ಆ ಆಚಾರ್ಯರೇ ದೈತ್ಯಪೀಡೆಗೆ ಬಗ್ಗದ ಸುರೋತ್ತಮರು. ಇತರರು ದೈತ್ಯರಿಂದ ಕಚ್ಚಲ್ಪಡುತ್ತಾರೆ. ದೈತ್ಯರನ್ನು ನಿಗ್ರಹಿಸಲಾರರು. ಮಧ್ವಾಚಾರ್ಯರು ದೈತ್ಯರನ್ನು ನಿಗ್ರಹಿಸಿ ಸನ್ಮತ ಸ್ಥಾಪನೆ ಮಾಡಿದ ವಜ್ರಕಾಯರು. ನಾನೂ ಹಾಗೆಯೇ. ''ಮಧ್ವಾಚಾರ್ಯರದ್ದೇ ಉತ್ತಮ ಮತ''. ಸರ್ವವೇದಗಳು ಹರಿಸರ್ವೋತ್ತಮತ್ವ ಹೇಳುವ ಸಚ್ಛಾಸ್ತ್ರ ಗುರುಗಳಲ್ಲಿ ಪೂರ್ಣಪ್ರಜ್ಞರೇ ಸರ್ವಜ್ಞಸಿದ್ಧಿದಾಯಕ ಗುರು. ಹೀಗೆ ಸತ್ಸಿದ್ಧಾಂತ. ಇಂತಹ ಆಚಾರ್ಯರಿಗೆ ಮಂತ್ರಸಿದ್ಧಿಯಿಂದ ಅವರ ಅಸ್ಥಿಗಳೆಲ್ಲಾ ಚಕ್ರ, ಶಂಖಾಂಕಿತಗಳಾಗಿವೆ. ಹರಿಪಾದತೀರ್ಥ ಪ್ರಾಶನದಿಂದ ಅತಿ ಪವಿತ್ರಗಳಾಗಿವೆ. ಭುಜಾಸ್ಥಿ ಶಂಖಚಕ್ರ ಮೂಡಿದೆ. ಜಾನ್ವಸ್ಥಿ ಪದ್ಮ ಗದೆಗಳು, ಎದೆ ಅಸ್ಥಿ ಹರಿಮೂರ್ತಿ , ಶಿರೋಸ್ಥಿ ನಾರಾಯಣ ಮುದ್ರೆ, ದಂತಾಸ್ಥಿ ಪಾದ ಚಿಹ್ನೆ , ವೃಂತಾಸ್ಥಿ (ಎದೆಗೂಡು) ಶಾರ್ಙ್ಗಧನುಸ್ಸು , ಕರ್ಣಾಸ್ಥಿ ಬಾಣಚಿಹ್ನೆ , ಪಾದಾಸ್ಥಿ ಪಾದಚಿಹ್ನೆ ಹೀಗೆ ದೇಹವೆಲ್ಲಾ ನನಗೂ ಆಗಿ ನನ್ನ ಅವಯವಗಳೆಲ್ಲಾ ನನ್ನನ್ನು ಹರಿಸೇವೆಗೆ ಎಳೆಯುತ್ತವೆ. ಸಂಸಾರ ಕೊಡೋದಿಲ್ಲ ಎಲೈ ವಿಪ್ರನೇ ! ನಾನು ಭಕ್ತಿಪಾಶದಿಂದ ಹರಿಪಾದಗಳನ್ನು ಬಿಗಿಯಾಗಿ ಕಟ್ಟಿ ಜ್ಞಾನಿಯಾಗಿ ಬದುಕಿ, ಕೊನೆಯಲ್ಲಿ ಯೋಗದಿಂದ ದೇಹವನ್ನು ತ್ಯಜಿಸಿ ಭೀಮಸೇನ ಲಕ್ಷಾಗೃಹದ ಸುರಂಗದಿಂದ ಹೊರಗೆ ಬಂದು ವೇದವ್ಯಾಸರನ್ನು ಸೇರಿದಂತೆ, ನಾನೂ ದೇವರ ಸಮೀಪಕ್ಕೆ ಹೋಗಿ ಸೇರುತ್ತೇನೆ. ಮುಂದಿನ ಜನ್ಮದಲ್ಲಿ ರಾಜನಾಗಿ ಹುಟ್ಟಿ ಆಧಾರಳನ್ನು ಸ್ವೀಕರಿಸಿ ಭೀಮನಂತೆ ಧರ್ಮಮಾರ್ಗದಲ್ಲೇ ಇರುತ್ತೇನೆ.

ಲಕ್ಷ್ಮೀಪತಿಯೇ ಈ ವೈಭವವನ್ನು ಸಜ್ಜನರಿಗೆ ತಿಳಿಸು. ನಾನು ಏಕಾದಶಿ ಹಂಸಸ್ವಾಮಿ ಅರಮನೆಗೆ ಹೋಗಿ, ಶ್ವಾಸನಿಯಮನಕಲಿತು ಲೋಕೋದ್ಧಾರಪ್ರೇರಣೆ ಮಾಡಿ ಸರ್ವ ಭೃತ್ಯರನ್ನು ಭವಸಾಗರದಿಂದ ಮೋಚನೆ ಮಾಡಿಬಿಡುತ್ತೇನೆ. ಆ ಸ್ವಾಮಿ ನನಗೆ ಹಿಂದಿನ



ಜ್ಞಾನ ದೃಢಮಾಡಿದ. ಅನಂತರ ಆನಂದತೀರ್ಥರ ಸಂಗಡ ಮಂತ್ರಾಲೋಚನೆ ಮಾಡಿ ಅವರ ಪಾದಕ್ಕೆ ಅಡ್ಡಬಿದ್ದೆ. ಅವರ ಜೊತೆಯಲ್ಲಿ ಬದರಿಗೆ ಬಂದು ಶುಕತಾತ ವೇದವ್ಯಾಸದೇವರನ್ನು ಕಂಡೆ. ಅವರಿಗೆ ನಮಿಸಿ ಅಪ್ಪಣೆ ಪಡೆದು ಘನೋದಕ ದಾಟಿ ಮಧುವನ್ನು ಕೊಲ್ಲಲು ಹಯಗ್ರೀವಸ್ವಾಮಿ ಹಿಡಿದಿದ್ದ ಧನುಸ್ಸು ಬಾಣಗಳನ್ನು ನೋಡಿದೆ. ಆ ಪ್ರಾಸವನ್ನೂ ನೋಡಿದೆ. ಇದೆಲ್ಲಾ ಹರಿದಾಸ್ಯ ಪ್ರಭಾವ. ದ್ವೈತಮತದ ಸಿದ್ಧಿ. 'ಅಹಂ ಬ್ರಹ್ಮಾಸ್ಮಿ' ಉಪಾಸಕ ಅಂಧಂತಮಸ್ಸಿಗೆ ಬೀಳುತ್ತಾನೆ. ಆ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ. (65-76)ಈ ಹನ್ನೊಂದು ಶ್ಲೋಕ ಮಧ್ವಮತದ ತಿರುಳು. ಸೋಹಂ ಭಾವ ಪರಬ್ರಹ್ಮನನ್ನೇ ಕೊಂದಂತೆ. ಮಹಾಬ್ರಹ್ಮಹತ್ಯೆ. ದಾಸೋಹಂ ಎಂದು ಉಪಾಸನೆ ಮಾಡಿದರೆ ತಮಸ್ಸಾಗುವುದಿಲ್ಲ. ಹೇ ಭೇದವಾದಿಯೇ ! ನೀನು ಹೇಳುವ ಭೇದವು ಸತ್ಯವಾಗಬೇಕಾದರೆ ವೇದಾದಿ ಪ್ರಮಾಣಗಳು ಸತ್ಯವಾಗಬೇಕೆಂದು ಮೊದಲು ಸಾಧಿಸು. ನಂತರ ಜಗತ್ತು ಸತ್ಯ ದೇವರಗುಣ ಪ್ರಕಾಶಗಳು ಸತ್ಯ ಎಂದು ಒಪ್ಪಿಸು. ಐಕ್ಯವಾದವನ್ನು ಬ್ರಹ್ಮನನ್ನು ದೋಷಿಮಾಡುವ ವಿರುದ್ಧಪ್ರಕ್ರಿಯೆ ಎಂದು ತಳ್ಳು. ದ್ವೈತವಾದವನ್ನು ಶಿಷ್ಯರಲ್ಲೂ ಸ್ಥಾಪಿಸಿ ಹರಿಧ್ಯಾನದಿಂದ ಹರಿಮಂದಿರ ಸೇರಿ ಇದೆಲ್ಲಾ ಅಭೇದವಾದದ ಜಯದ ಪ್ರಭಾವವೆಂದು ತಿಳಿ. ನಾನು ಘನೋದಕ ದಾಟಿ ವಿಪ್ರನಿಗೆ ಬೋಧಿಸುತ್ತೇನೆ. ವಿಪ್ರನೇ ನೀನು ಹೃದಯಸ್ಥಿತ ಹರಿಯನ್ನು ನೋಡು. ನೆಲ್ಲಿನ ಮೇಲಿರುವ ಸಣ್ಣ ಎಸಳಿನಂತೆ ಕಾಣುವ ಸುವರ್ಣಜ್ಯೋತಿಯ ಮಧ್ಯವನ್ನು ನೋಡು. ಅಲ್ಲೇ ಆತ್ಮನಾಮಕ ಹರಿಯು ಸಣ್ಣ ಆಕಾರದಲ್ಲಿದ್ದರೂ ಗಗನದ ಮಹಾಕಾಶದ ಸೂರ್ಯಮಂಡಲದಂತೆಯೇ ಕಾಣುತ್ತಾನೆ. ಕೋಟಿಸೂರ್ಯಕಾಂತಿ ಸದೃಶ ಚಂದ್ರಕೋಟಿಗಳಂತೆ ಆಹ್ಲಾದಕ. ಆ ಬಿಂಬಸ್ವಾಮಿ ದಿವ್ಯಕಿರೀಟಾದಿ ಅಲಂಕೃತ ಅತ್ಯಂತಭಿನ್ನ ಅತಿ ಸುಂದರ. ಅವನು ತನ್ನ ಸರ್ವರೂಪಾಭಿನ್ನ. ದಾಸ್ಯಭಾವದಿಂದ ಅವನನ್ನು ನೋಡಿ ನಲಿದು ಸ್ತುತಿಸು. ನನ್ನ ಉಪದೇಶದಿಂದ ಯಾರಿಗೆ ಕಾಣುವುದಿಲ್ಲ? ಬ್ರಾಹ್ಮಣ ! ನಾನು ಚಂದ್ರಾಂತರ್ಯಾಮಿ ಹರಿಯನ್ನು ನೋಡಿ ಸರ್ವಕಾಮಹೀನನಾಗಿ ಆನಂದದಿಂದ ಶ್ಲೋಕಗಳನ್ನು ಸ್ವಪ್ನದಲ್ಲಿ ಸೃಷ್ಟಿಸುತ್ತೇನೆ. ಸಪ್ತಸಮುದ್ರ ಸಪ್ತದ್ವೀಪಗಳಲ್ಲಿ ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಿ ಸರ್ವತ್ರ ಪೂಜಿತನಾಗಿ ಸುವರ್ಣಾಲಂಕೃತನಾಗಿ

ರಾಜನಂತೆ ವೇಂಕಟಾದ್ರಿಗೂ ಹೋಗಿ ಅಲ್ಲಿ ಚತುರ್ಮುಖನ ಜನಕನನ್ನು ಕಣ್ಣುತುಂಬಾ ನೋಡಿ ಸುಖಿಯಾಗುತ್ತೇನೆ. ತ್ರಿವಿಕ್ರಮೋತ್ಸವ ಸಮೀಪವಾದರೆ ಉಡುಪಿಯಲ್ಲಿ ಯತಿಗಳೊಂದಿಗೆ ನೈವೇದ್ಯಸ್ವೀಕರಿಸಿ ಸೋದೆಗೆ ಮೂರುಕೋಟಿ ಯತಿಗಳೊಂದಿಗೆ ಬಂದು ನಿನ್ನ ಮೃಷ್ಟಾನ್ನ ಸ್ವೀಕಾರಮಾಡಿ ನಿನಗೆ ಹರಸುತ್ತೇನೆ. ನೀನು ಕೇಳಿಕೊಂಡಿದ್ದನ್ನೆಲ್ಲಾ ತಿರುಗಿ ಕೊಡುತ್ತೇನೆ. ಗುರುವಾದ ನನ್ನನ್ನು ಪೂಜೆ ಮಾಡು ನನ್ನ ಆಜ್ಞಾಪಾಲಿಸಿ ನನ್ನ ಅಜ್ಞಾನ ಕಳೆದುಕೋ. ನಿನ್ನಂತಹ ಜ್ಞಾನಿಗಳಿಲ್ಲ. ಹಾಗಾಗುತ್ತಿ. ನನ್ನಂತಹ ಯತಿಗಳೂ ಇಲ್ಲವೇ ಇಲ್ಲ ಎಂದಿದ್ದಾರೆ. ನಂತರ ಮಂಗಳ. ಹೀಗೆ ಹೇಳಿದ್ದೆಲ್ಲಾ ನೂರೈವತ್ತು ವರ್ಷಗಳ ಮೇಲೆ ನಡೆದು ವೃಂದಾವನಾಚಾರ್ಯರು ಜ್ಞಾನಿಗಳಾದರು ಎಂದಮೇಲೆ ಮಧ್ವಮತವನ್ನು ಕೊಂಡಾಡುವ ಈ ಅದ್ಭುತ ಗ್ರಂಥಕ್ಕೆ ಎಷ್ಟು ಪೂಜೆಮಾಡಿದರೆ ಸಾಕು ?

॥ ಶ್ರೀವಾದಿರಾಜಾಂತರ್ಗತಶ್ರೀಮಧ್ವೇಶಾರ್ಪಣಮಸ್ತು ॥

## ಅಥ ದಶಮಾಧ್ಯಾಯ

ವೈಭವಪರ್ವದ ದೊಡ್ಡ ಅಧ್ಯಾಯ 167 ಶ್ಲೋಕಗಳು, 17 ಪ್ರಕರಣಗಳು. ಗುರುರಾಜರು ಹೇಳುತ್ತಾರೆ- ''ಬ್ರಾಹ್ಮಣ ! ಭೂತರಾಜನು ಕುಬೇರ ಕೊಟ್ಟ ಕಿರೀಟವನ್ನು ತಂದು ನನ್ನ ತಲೆಯಮೇಲೆ ಇಟ್ಟು ಸೇವಿಸಿದನು. ನಂತರ ಅವನೇ ನಿನ್ನ ಪುತ್ರನ ಕಾಲುಬಳೆಯನ್ನು ಹಾರಿಸಿಬಿಟ್ಟಿದ್ದಾನೆ. ಚಿಂತಿಸಬೇಡ. ಅದಕ್ಕೆ ಮೂರರಷ್ಟು ಬೆಳ್ಳಿಕೊಡಿಸುತ್ತೇನೆ. ಮಗನಿಗೆ ಕಾಲುಬಳೆ ಮಾಡಿಸು'' ಎಂದಿದ್ದಾರೆ. ಇದು ಒಂದು ಪ್ರಾರಬ್ಧೋಪಮರ್ದನ ರೀತಿ. ಈ ಮಹಿಮೆ ತೋರಿಸುವ ಇನ್ನೊಂದು ಕಥೆ ಹೇಳಿದ್ದಾರೆ. ''ಪಾರ್ವತಿಯನ್ನು ಭಕ್ತ ಪೈಲಮುನಿಯು ತನ್ನ ಪ್ರಾರಬ್ಧನಾಶಕ್ಕೆ ಏನು ಮಾಡಲಿ ಎಂದು ಕೇಳಿದನು. ಆಕೆ ''ಕೈಲಾಸದ ಸುತ್ತಲೂ ದೀಪವನ್ನು ಹಚ್ಚು, ಹೋಗುತ್ತದೆ'' ಎಂದಳು. ಪೈಲನಿಗೆ ಆಗ ಶ್ರೀವಾದಿರಾಜರ ವೃಂದಾವನದ ಜ್ಞಾಪಕವಾಯಿತು. ಆತನಲ್ಲಿ ಶೇಷನ ಆವೇಶ. ಆತ ಬತ್ತಿ , ತುಪ್ಪ ಎಲ್ಲವನ್ನೂ ತೆಗೆದುಕೊಂಡು ಬಂದು ವೃಂದಾವನದ ಸುತ್ತಲೂ ದೀಪಹಚ್ಚಿ ತನ್ನ ಪ್ರಾರಬ್ಧವನ್ನು ಕಳೆದುಕೊಂಡನು. ಹೀಗೆ ಎಲ್ಲ ಋಷಿಗಳೂ ಮಾಡಿದ್ದಾರೆ ಎಂದಿದೆ. ಹಾಗೆ ವಿಪ್ರನಿಗೂ ಹೇಳಿದ್ದಾರೆ. ''ನಿನಗೆ ಮೃತ್ಯು



ಸನ್ನಿಹಿತವಾಗಿದೆ. ಗರುಡ ಕದ್ರೂಮಕ್ಕಳನ್ನು ಸರ್ಪಗಳಾದರೂ ಮುಟ್ಟದೆ ರಕ್ಷಿಸಿದಂತೆ ನಿನ್ನನ್ನು ರಕ್ಷಿಸಬೇಕೆಂದು ದೇವರನ್ನು ಬೇಡುತ್ತೇನೆ'' ಎಂದಿದ್ದಾರೆ. ವೃಂದಾವನದ ಮುಂದೆ ಆಖ್ಯಾನ ವ್ಯಾಖ್ಯಾನದಿಂದ ನನ್ನನ್ನು ಸಂತೋಷಪಡಿಸು ಎಂದು ಲಕ್ಷ್ಮೀಪತಿಗೆ ಹೇಳಿದ್ದಾರೆ. ಮುಂದೆ ವಿಪ್ರನಿಗೆ ರಹಸ್ಯಾರ್ಥದ ಒಗಟು ಶ್ಲೋಕ ಹೇಳಿದ್ದಾರೆ. ವೃಂದಾವನಾಚಾರ್ಯರ ಕೃಪೆಯಿಂದ ಅದೆಲ್ಲಾ ಈಗ ವ್ಯಾಖ್ಯಾತವಾಗಿದೆ. ''ಮಹೀಜ ವ್ಯಾಸದೇವರು ಮತ್ತು ಹಯಗ್ರೀವದೇವರು ಏಕಾಂತವಾಗಿ ನಿನ್ನ ಪೆಟ್ಟಿಗೆಗೆ ಜೊತೆಯಾಗಿ ಸೇರಿದರು. ಪುನಃ ಶ್ರೀಕೃಷ್ಣನ ಜೊತೆಯಲ್ಲಿ ವ್ಯಾಸದೇವರ ಪೂಜೆ ಆಗುತ್ತೆ. ತಪ್ಪುವುದಿಲ್ಲ. ಚೋರರಿಗೆ ಸೂರ್ಯೋದಯ ಬೇಡ. ಸುಖಕಾಮಿಗಳಿಗೆ ನದೀ ಬೇಡ. ದುರ್ಜನರಿಗೆ ವಿಪ್ರಬೇಡ. ಹರಿವಾಯುಗಳ ಸಾತ್ವಿಕಪ್ರೇರಣೆಯಿಲ್ಲದವರು ಏನಾದರೂ ಮಾಡಲಿ, ಎಷ್ಟಾದರೂ ಹೊಟ್ಟೆಕಿಚ್ಚು ಮಾಡಲಿ, ಅವನನ್ನು ಮುಂದೆ ತರುತ್ತೇನೆ. ವೃಂದಾವನಾಚಾರ್ಯ ದ್ವೇಷಿಗಳಿಗೆ ನನ್ನ ಮಹತ್ವಬೇಡವೆನ್ನಿಸುತ್ತದೆ. ಆದರೂ ನನ್ನ ವೃಂದಾವನ ಅನೇಕಕೋಟಿ ದೇವಸಹಿತವಾಗಿ, ಹನುಮಭೀಮಮಧ್ವರಿಂದ ಅಲಂಕೃತವಾಗಿ ಮೆರೆಯುತ್ತೆ. ದೇವತೆಗಳು ಪರ್ವಕಾಲದಲ್ಲಿ ಬಂದು ಸ್ನಾನಾದಿಗಳಿಂದ ಪ್ರಾರಬ್ಧಪಾಪವನ್ನು ಕಳೆದುಕೊಳ್ಳುತ್ತಾರೆ. ಧವಳಗಂಗೆಯು ಧನ್ವಂತರೀ ಸನ್ನಿಧಾನದಿಂದ ಸರ್ವರೋಗವನ್ನೂ ಪರಿಹರಿಸುತ್ತಾಳೆ. ದುರಾಚಾರದ ಪಾಪಗಳನ್ನು ಪ್ರಾರ್ಥನೆ ಮಾತ್ರದಿಂದ ತೊಳೆದುಬಿಡುತ್ತಾಳೆ. ಅದು ಗಂಗೆಯ ಪ್ರಭಾವ. ಈ ಅದ್ಭುತಮಹಿಮೆ ಕಲಿಪ್ರಭಾವದಿಂದ ಬುದ್ಧಿರಹಿತರಿಗೆ ತಿಳಿಯುವುದಿಲ್ಲ. ಹಯಗ್ರೀವ ಮತ್ತು ಹಂಸರೂಪಿ ಶ್ರೀಹರಿಯು ನನ್ನಿಂದ ಪ್ರಾರ್ಥಿರಾಗಿ ವೃಂದಾವನದ ಮಹಿಮೆ ಹೆಚ್ಚಿಸುತ್ತಾರೆ.

ಲಕ್ಷ್ಮೀಪತಿಗೆ ವೈಭವವಿಶೇಷ ವರ್ಣಿಸಿದ್ದಾರೆ. ''ನಾನು ಶಾಲ್ಮಲೀ ದ್ವೀಪಕ್ಕೆ ಹೋಗಿದ್ದೆ. ಅಲ್ಲಿನ ಸುಮಾಲಿ ಎಂಬ ರಾಜನು ನನ್ನ ಲಕ್ಷಣಗಳನ್ನು ನೋಡಿ, ಆಶ್ಚರ್ಯ ಯುಕ್ತನಾಗಿ -- ತಾವು ವ್ಯಾಘ್ರಚರ್ಮನಿಂದಲೂ ಆರಾಧಿತರು. ನಮ್ಮ ಆಸ್ಥಾನದ ಶುಕ್ರಾಚಾರ್ಯರು ಹೇಳಿದ್ದಾರೆ. ವಾದಿರಾಜರು ಹಯಗ್ರೀವೋಪಾಸಕರು, ತುಂಬಾ ದೊಡ್ಡವರು ಎಂದು ಬೋಧಿಸಿದ್ದಾರೆ. ಅನುಗ್ರಹಿಸಬೇಕು-- ಎಂದನು. ಯಶೋದಾತನಾದ ದೇವರ ಕೃಪೆಯನ್ನು ಮನಸಾ ವಂದಿಸಿ ಆ ರಾಜನನ್ನು ಅನುಗ್ರಹಿಸಿ ಹೊರಟು ಅಲ್ಲಿಯೇ ಒಂದು

ವನದಲ್ಲಿ ವಾನರ ದೇವತೆಗಳ ಪರಮಪವಿತ್ರಸಭೆಯನ್ನು ನೋಡಿದೆ. ಅವರ ಮತವನ್ನು ಕೇಳು. --ಮಧ್ವಮತವೇ ದಿವ್ಯಮತ-- ಹಾಗೆಂದು ಬ್ರಹ್ಮರಾಯನಿಗೆ ನಾರಾಯಣದೇವರು ಹೇಳಿದರು. --ಆ ಮತದ ಪ್ರಕಾರ ಜಗತ್ಸತ್ಯತ್ವ, ವಿಷ್ಣುಸರ್ವೋತ್ತಮತ್ವಾದಿಗಳೇ ಪ್ರಮಾಣಸಿದ್ಧ ಎಂದು ಸಾಧಿಸಲ್ಪಟ್ಟು ವ್ಯಾಸ ಸೇವೆ ಮಾಡಿದಂತಾಗಿದೆ. ದುರ್ಮತಗಳನ್ನು ಧ್ವಂಸಮಾಡಿ ಮಧ್ವಾಚಾರ್ಯರು ನನ್ನ ಸಮೀಪಕ್ಕೆ ಬರುತ್ತಾರೆ. ಅವರ ಮೂಳೆಗಳೆಲ್ಲಾ ನನ್ನ ಶಂಖಚಕ್ರಾಂಕಿತ. ಆ ಮತದಲ್ಲಿ ಆಗ್ರಹವುಳ್ಳವರು ಶ್ರೇಷ್ಠಲೋಕಗಳನ್ನು ಹೊಂದುತ್ತಾರೆ-- ಹೀಗೆ ನಾರಾಯಣ ಬ್ರಹ್ಮರಾಯರಿಗೆ ಹೇಳಿದ್ದನ್ನು ಆ ಸಭೆಯ ವಾನರಾಧ್ಯಕ್ಷರು ಪ್ರಕಟಿಸಿದರು. ಲಕ್ಷ್ಮೀಪತಿ ಪಂಡಿತರಿಗೆಲ್ಲಾ ನೀನೂ ಹೇಳು. ಪಂಚವೃಂದಾವನ ಪ್ರತಿಷ್ಠೆ ಮಾಡಿ ಬೇಕಾದ್ದನ್ನು ಪಡೆ. ಪ್ರಸನ್ನನಾಗುತ್ತೇನೆ'' ಎಂದಿದ್ದಾರೆ.

ನಂತರ ವಿಪ್ರನಿಗೆ ಹೇಳುತ್ತಾ, ''ನನ್ನ ವೃಂದಾವನ ಕಲಿಯುಗದ ಕಾಮಧೇನು. ವೇದವೇದ್ಯರ ವೃಂದಾವನವೂ ಹಾಗೆ. ಆಖ್ಯಾನಕೃತಿಯನ್ನು ಪಾರಾಯಣಮಾಡಿದರೆ ಸರ್ವಪಾಪ ಹೋಗುತ್ತೆ. ಅರ್ಥಜ್ಞಾನಪೂರ್ವಕವಾಗಿ ಪಠಿಸಿದರೆ ಸರ್ವೇಷ್ಟಪ್ರಾಪ್ತಿ-ಯಾಗುತ್ತದೆ. ಕೃತಿಖ್ಯಾಪನ ಶ್ರೇಷ್ಠಕೆಲಸ. ಜೊತೆಗೆ ಭಾರತ ಪಾರಾಯಣ ಶುಭ, ಪಂಚವೃಂದಾವನದಲ್ಲಿ ಪಂಚಮೂರ್ತಿ ತಿಳಿ. ಜ್ಞಾನಸಾಲದಿದ್ದರೆ ವೃಂದಾವನ ಸ್ಥಾಪಿಸಿ ಪೂಜಿಸಲಿ. ಭಕ್ತರ ವಿಭೂತಿಗಾಗಿ ಈ ಮಹಿಮೆ ಸ್ವಲ್ಪ ಹೇಳಿದೆ, ಸೇವೆಯೂ ವಿಹಿತ-ವಾಗಿದೆ. ನಾನು ಪೂರ್ಣಕಾಮ, ನನಗೆ ಯಾವುದರ ಅವಶ್ಯಕತೆಯೂ ಇಲ್ಲ, ಲಕ್ಷ್ಮೀಪತಿ! ವಿಪ್ರನೇ ಪ್ರಧಾನ ಅನುಗ್ರಾಹ್ಯ. ಅವನ ಸ್ವಪ್ನದಲ್ಲೇ ಹೇಳಿದ್ದು. ನೀನು ಕೃತಿಯನ್ನು ಖ್ಯಾತಿಮಾಡಿ ವಿಪ್ರನನ್ನು ಸೇವಿಸಿ ಜ್ಞಾನ ಹೊಂದು. ಇತರರು ಆಖ್ಯಾನ ಶ್ರವಣಮಾಡಿ ನನ್ನನ್ನು ಸೇವಿಸಿ ಎಲ್ಲಾ ವರವನ್ನೂ ಪಡೆಯಲಿ, ಎಲ್ಲರಿಗೂ ವ್ರತಾನುಸಾರ ಫಲಬರುತ್ತದೆ. (105) ಎಂದಿದ್ದಾರೆ. ಅನಂತರ ವಿಪ್ರನಿಗೆ 'ನಿನ್ನ ಅನಶನವ್ರತ ಸಾಕು. ನನ್ನ ಮಂತ್ರ ಜಪಿಸು. ನನ್ನ ಪಾದಗತಿ ಕೊಡುತ್ತೇನೆ. ಭಾರತ ಓದು. ವೇದವೇದ್ಯರನ್ನು ಸೇವಿಸು.' ' ಹೇ ವೇದವೇದ್ಯ ! ದುರ್ಮತ ಧ್ವಂಸಮಾಡು. ಆಖ್ಯಾನವನ್ನು ಯೋಗ್ಯ ವಿವಕ್ಷಿತ ಪಾತ್ರರಿಗೆ ನಿನ್ನ ಪ್ರೇರಣೆಯಿಂದ ತಲುಪಿಸು. ವಿಪ್ರನನ್ನು ಕಾಪಾಡು. ಜನರಿಗೆ



ನಂಬಿಕೆ ಬರಲೆಂದು ಇವನಿಗೇ ಸ್ವಪ್ನದರ್ಶನ ಕೊಟ್ಟಿದ್ದೇನೆ. ಅಶರೀರಿ ನಾನಾದ್ದರಿಂದ ವ್ಯಾಕರಣ ದೋಷ ಆಖ್ಯಾನದಲ್ಲಿ ಹೇಳಕೂಡದು. ವಸ್ತುತಃ ಛಂದೋಭಂಗಾದಿಗಳು ಇಲ್ಲ. ಗ್ರಂಥ ನನ್ನ ಶಾಸನ ಎಂದು ತಿಳಿದು ಆಚರಿಸಬೇಕು' ಎಂದಿದ್ದಾರೆ. 'ಶೇಷ , ಆಖ್ಯಾನ ನಿರ್ದೋಷವೆಂದು ಖ್ಯಾಪಿಸು. ಪಂಚ ಉತ್ಸವ ಮಾಡಿಸಿ, ಮುಕ್ತನಾಗು. ವಿಪ್ರನನ್ನು ಬಿಡದೇ ಪೂಜಿಸು.' ಶೇಷಾದ್ರಿ ಪಂಡಿತನಿಗೂ ತಿಳಿಸೆಂದು ಲಕ್ಷ್ಮೀಪತಿಗೆ ಹೇಳಿ ಆ ಪಂಡಿತ ನಿರ್ಮತ್ಸರನಾಗಬೇಕೆಂದು ಸೂಚಿಸಲು 30 ದೋಷ ಪಂಡಿತರಲ್ಲಿರಬಾರ-ದೆಂದು ಹೇಳಿ ಕೆಲವು ದೋಷಗಳನ್ನು ನಿರ್ದೇಶಮಾಡಿ 'ಅಂತಹ ದೋಷಗಳನ್ನು ಬಿಡು.' ಎಂದು ಶೇಷಾದ್ರಿಪಂಡಿತನಿಗೆ ತಿಳಿಸಬೇಕೆಂದು ಲಕ್ಷ್ಮೀಪತಿಗೆ ಅಪ್ಪಣೆ ಮಾಡಿದ್ದಾರೆ. ನಂತರ ಮಂಗಳ. ಈ ಅಧ್ಯಾಯದಲ್ಲಿ ಸೂಚಿಸಿದ ನಿರಶನ ವ್ರತವನ್ನು ಹನ್ನೆರಡುವರ್ಷ ವೃಂದಾವನಾಚಾರ್ಯರು ಮಾಡಿದ್ದಾರೆ.

ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾಭಿನ್ನ ಶ್ರೀಕೃಷ್ಣಾರ್ಪಣಮಸ್ತು.